@ Taking into account the treasury bills worth Rs. 20.35 Cr. and floating debt of Rs. 2.71 crores as on 31-3-1977, the ultimate gap will be (—) Rs. 103.30 crores.

1978–79ನೇ ಸಾಲಿನ ಬಜೆಟನ್ನು 27ನೇ ಮಾರ್ಚ್ 1978ರಂದು ವಿಧಾನಸಭೆಯ ಮುಂದೆ ಮಂಡಿಸುತ್ತಾ ಅರ್ಥ ಮಂತ್ರಿಗಳಾದ ಶ್ರೀ ಎಸ್. ಎಂ. ಯಾಹ್ಯಾರವರು ಮಾಡಿದ ಭಾಷಣದ ಕನ್ನಡ ಭಾಷಾಂತರ.

ಮಾನ್ಯ ಅಧ್ಯಕ್ಷರೇ,

ನಾನೀಗ 1978–79ನೇ ಸಾಲಿನ ಬಜೆಟನ್ನು ಮಂಡಿಸಲು ತಮ್ಮ ಮುಂದೆ ನಿಂತಿದ್ದೇನೆ.

2. ಇತ್ತೀಚಿನ ಚುನಾವಣೆಗಳಲ್ಲಿ ಕರ್ನಾಟಕದ ಜನತೆಯು ತನ್ನ ನಿಸ್ಸಂದಿಗ್ಧವಾದ ಮತ್ತು ಸ್ಪಷ್ಟ ಬೆಂಬಲವನ್ನು ನೀಡಿ ನಮ್ಮನ್ನು ಮತ್ತೆ ಅಧಿಕಾರಕ್ಕೆ ತಂದಿದೆ. ಜನರು ನಮ್ಮಲ್ಲಿ ಮತ್ತು ನಮ್ಮ ನೀತಿಗಳಲ್ಲಿ ಇಟ್ಟಿರುವ ವಿಶ್ವಾಸಕ್ಕೆ ಇದು ಸಂಕೇತ ಎಂಬುದಾಗಿ ನಾನು ಭಾವಿಸುತ್ತೇನೆ. ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯ ದಿಶೆಯಲ್ಲಿ ಅದರಲ್ಲಿಯೂ ವಿಶೇಷವಾಗಿ ದುರ್ಬಲ ವರ್ಗಗಳ ಸ್ಥಿತಿಗತಿಗಳನ್ನು ಸುಧಾರಿಸುವಲ್ಲಿ ಕಳೆದ ಕೆಲವು ವರ್ಷಗಳಲ್ಲಿ ನಾವು ಮಾಡಿದ ಪ್ರಯತ್ನಗಳನ್ನು ಜನತೆಯು ಮೆಚ್ಚಿಕೊಂಡಿದೆ ಎಂಬುದಕ್ಕೆ ಜನತೆಯು ನಮಗೆ ನೀಡಿದ ಮತ ಸ್ಪಷ್ಟ ನಿದರ್ಶನವಾಗಿದೆ.

3. ಬಜೆಟು ಆರ್ಥಿಕ ಮತ್ತು ಸಾಮಾಜಿಕ ನೀತಿಯನ್ನು ರೂಪಿಸುವಲ್ಲಿ ಮತ್ತು ನಮ್ಮ ಉದ್ದೇಶಗಳ ಸಾಧನೆಯಲ್ಲಿ ಒಂದು ಪ್ರಬಲ ಮಾಧ್ಯಮವಾಗಿದೆ. ಈ ಮಾಧ್ಯಮದ ಮೂಲಕ ಸಾರ್ವಭೌಮ ಸಂಸ್ಥೆಯಾದ ವಿಧಾನಮಂಡಲವು ಸರ್ಕಾರದ ಕಾರ್ಯಾಂಗಕ್ಕೆ ಮಾರ್ಗದರ್ಶನ ನೀಡುವುದಲ್ಲದೆ ಅದರ ಮೇಲೆ ನಿಯಂತ್ರಣವನ್ನೂ ಹೊಂದಿರುವುದು. ಈ ದೃಷ್ಟಿಯಿಂದ ಈ ಬಜೆಟಿನಲ್ಲಿ ನಾನು ಸರ್ಕಾರದ ತಾತ್ವಿಕ, ಆರ್ಥಿಕ ಮತ್ತು ಸಾಮಾಜಿಕ ನೀತಿಯ ಅಂಶಗಳನ್ನು ಪ್ರತಿಬಿಂಬಿಸುವ ಅನೇಕ ಕಾರ್ಯಕ್ರಮಗಳನ್ನು ಅಳವಡಿಸಿದ್ದೇನೆ.

4. ಕೇಂದ್ರ ಅರ್ಥಮಂತ್ರಿಗಳು ತಮ್ಮ ಇತ್ತೀಚಿನ ಬಜೆಟ್ ಭಾಷಣದಲ್ಲಿ ಬೆಲೆಗಳ ಏರಿಕೆ, 1976-77ಕ್ಕಿಂತ ಪ್ರಸಕ್ತ ವರ್ಷದಲ್ಲಿ ಅಭಿವೃದ್ಧಿಯ ಗತಿ ಕುಂದಿರುವುದು, ಯೋಜನಾ ವೆಚ್ಚಗಳ ಮಂದಗತಿ ಮತ್ತು ವಿದ್ಯುಚ್ಛಕ್ತಿಯ ತೀವ್ರ ಕೊರತೆ ಮೊದಲಾದ ಕೆಲವು ರಾಷ್ಟ್ರೀಯ ಸಮಸ್ಯೆಗಳತ್ತ ಜನತೆಯ ಗಮನವನ್ನು ಸೆಳೆದಿದ್ದಾರೆ. ಕೆಲವು ಮಟ್ಟಿಗೆ ನಮ್ಮ ರಾಜ್ಯವು ಕೂಡ ಈ ಸಮಸ್ಯೆಗಳನ್ನು ಎದುರಿಸಿದೆ. ಇದಲ್ಲದೆ ಋತುಮಾನ ಪರಿಸ್ಥಿತಿ ಮೊದಲಾದ ಕೆಲವು ಪ್ರಾದೇಶಿಕ ಸಮಸ್ಯೆಗಳನ್ನೂ ಎದುರಿಸಬೇಕಾಯಿತು.

5. ಈಗ ನಿಮ್ಮ ಮುಂದೆ ಮಂಡಿಸಲಾಗುತ್ತಿರುವ 1978–79ನೇ ಸಾಲಿನ ಬಜೆಟು 6ನೇ ಪಂಚವಾರ್ಷಿಕ ಯೋಜನೆಯ ಮೊದಲಿನ ವರ್ಷಕ್ಕೆ ಸಂಬಂಧಿಸಿದ್ದು, ಹೆಚ್ಚು ಮಹತ್ವದ್ದಾಗಿದೆ. ಪ್ರಸಕ್ತ ಆರ್ಥಿಕ ವರ್ಷದ ಕೊನೆಯೊಂದಿಗೆ 5ನೇ ಪಂಚವಾರ್ಷಿಕ ಯೋಜನೆಯು ಮುಕ್ತಾಯವಾಗಬೇಕೆಂದೂ 6ನೇ ಪಂಚವಾರ್ಷಿಕ ಯೋಜನೆಯು 1978–79ನೇ ಸಾಲಿನಿಂದಲೇ ಆರಂಭವಾಗಬೇಕೆಂದೂ ನಿರ್ಣಯಿಸಲಾಗಿದೆ. ಈ ಸನ್ನಿವೇಶದಲ್ಲಿ, 1978-79ನೇ ಸಾಲಿನ ಎಲ್ಲಾ ರಾಜ್ಯಗಳ ಒಟ್ಟು ಯೋಜನಾ ಗಾತ್ರವು ಕೇಂದ್ರ ಸರ್ಕಾರದ ಯೋಜನಾ ಗಾತ್ರಕ್ಕಿಂತ ದೊಡ್ಡದಾಗಿರುವುದು ಶುಭ ಸೂಚಕವಾಗಿದೆ. ಈ ಪರಿಸ್ಥಿತಿಯೇ ಮುಂದುವರಿಯುವ ಸೂಚನೆಗಳಿವೆ. 6ನೇ ಪಂಚವಾರ್ಷಿಕ ಯೋಜನೆಯ ಗಾತ್ರ, ಸ್ವರೂಪ ಮತ್ತು ರಚನೆಯ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಇತ್ತೀಚೆಗೆ ನಡೆದ ರಾಷ್ಟ್ರೀಯ ಅಭಿವೃದ್ಧಿ ಪರಿಷತ್ತಿನ ಸಭೆಯಲ್ಲಿ ವಿಚಾರ ವಿನಿಮಯ ಪ್ರಾರಂಭವಾಗಿದೆ. ಇತರ ವಿಷಯಗಳೊಂದಿಗೆ, ಏಳನೇ ಆರ್ಥಿಕ ಆಯೋಗದ ನಿರ್ಣಯವು ಬಂದ ಬಳಿಕ ಈ ಯೋಜನೆಗೆ ಒಂದು ಅಂತಿಮ ಸ್ವರೂಪ ಬರುವುದು ರಾಜ್ಯ ಸರ್ಕಾರಗಳೇ ಹೆಚ್ಚಿನ ಹೊಣೆ ಹೊರಬೇಕಾಗಿರುವಂಥ ವ್ಯವಸಾಯ, ಜನಾರೋಗ್ಯ ಮತ್ತು ವಸತಿ ನಿರ್ಮಾಣ ಇವೇ ಮೊದಲಾದ ಅಭಿವೃದ್ಧಿ ಕ್ಷೇತ್ರಗಳಲ್ಲೂ ಸಹ ಕೇಂದ್ರವಲಯದಲ್ಲಿ ಹಂಚಿಕೆಗಳನ್ನು ಹೆಚ್ಚಾಗಿ ಕೇಂದ್ರೀಕರಿಸುವ ಪ್ರವೃತ್ತಿ ಕಂಡುಬಂದಿದೆ. ಈ ಯೋಜನೆಯ ಬಗ್ಗೆ ವಿಚಾರ ವಿನಿಮಯ ನಡೆಸುವಾಗ ಅದರಲ್ಲಿ ಕೆಲವೊಂದು ತಿದ್ದುಪಾಟುಗಳನ್ನು ಮಾಡ ಬೇಕೆಂದು ನಾವು ಒತ್ತಾಯ ಪಡಿಸುತ್ತೇವೆ.

6. ಕೆಲವೊಂದು ತೊಂದರೆಗಳು ಇದ್ದಾಗಲೂ ಬಹಳಮಟ್ಟಿಗೆ ರಾಜ್ಯದ ಆರ್ಥಿಕ ಸ್ಥಿತಿಗತಿಯು ಪ್ರಸಕ್ತ ವರ್ಷದಲ್ಲಿ ತೃಪ್ತಿಕರವಾಗಿತ್ತೆಂದೇ ಹೇಳಬಹುದು. ಬೆಲೆಗಳ ಮಟ್ಟ ಮತ್ತು ಆಹಾರ ಧಾನ್ಯಗಳನ್ನು ಒಳಗೊಂಡು ಅಗತ್ಯ ವಸ್ತುಗಳು ಸುಲಭವಾಗಿ ದೊರೆಯುತ್ತಿರುವುದು—ಇವೇ ಸ್ಥಿತಿಗತಿಯು ತೃಪ್ತಿಕರವಾಗಿದೆ ಎಂಬುದಕ್ಕೆ ಸ್ಪಷ್ಟ ನಿದರ್ಶನಗಳಾಗಿವೆ. ರಾಜ್ಯದ ಎಲ್ಲಾ ಸೂಕ್ತ ಸ್ಥಳಗಳಲ್ಲಿ ಸುಮಾರು 15,000 ವಿತರಣಾ ಕೇಂದ್ರಗಳಿದ್ದು ಸಾರ್ವಜನಿಕ ವಿತರಣಾ ಪದ್ಧತಿಯಿಂದ ವರ್ಷದುದ್ದಕ್ಕೂ ಆಹಾರ ಧಾನ್ಯಗಳು ಜನರಿಗೆ ದೊರೆಯುವಂತಾಗಿದೆ. ಇದಲ್ಲದೆ, ವಿಶ್ವ ಆಹಾರ ಯೋಜನೆಯ ಮೇರೆಗೆ, ಕೇರ್ ಸಂಸ್ಥೆಯ ಯೋಜನೆಯ ಮೇರೆಗೆ ಮತ್ತು ಭಾರತ ಸರ್ಕಾರದ ''ದುಡಿಮೆಗೆ ಆಹಾರ'' ಎಂಬ ಯೋಜನೆಯ ಮೇರೆಗೆ ದೊರೆತ ಸಹಾಯದಿಂದ ಕಾಮಗಾರಿಗಳು ನಡೆಯುವ ಸ್ಥಳದಲ್ಲಿಯೇ ಅದರಲ್ಲಿಯೂ ವಿಶೇಷವಾಗಿ ನೀರಾವರಿ ಮತ್ತು ಭೂಸಾರ ರಕ್ಷಣಾ ಕಾಮಗಾರಿಗಳು ನಡೆಯುವ ಸ್ಥಳಗಳಲ್ಲಿಯೇ ಆಹಾರವನ್ನು ಹಂಚಲು ನಮಗೆ ಅನುಕೂಲವಾಯಿತು. ಸಾರ್ವಜನಿಕ ವಿತರಣಾ ಪದ್ಧತಿಯಲ್ಲಿ ಗೋಧಿ ಮತ್ತು ಮಿಲೋಗಳನ್ನು ಜನರು ನಿರೀಕ್ಷಣೆಗಿಂತ ಕಡಿಮೆ ಪ್ರಮಾಣದಲ್ಲಿ ತೆಗೆದುಕೊಂಡಿರುವುದನ್ನು ನೋಡಿದರೆ ಸಾರ್ವಜನಿಕರು ಕೊಂಡುಕೊಳ್ಳಬಹುದಾದ ಬೆಲೆಗೆ ಬಹಿರಂಗ ಪೇಟೆಯಲ್ಲಿ ಆಹಾರ ಧಾನ್ಯಗಳು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತಿವೆಂದು ಕಂಡುಬರುವುದು ಆದರೂ, ಬಳಕೆದಾರರಿಗೆ ಪರಿಹಾರವನ್ನು ಒದಗಿಸುವ ಉದ್ದೇಶದಿಂದ ಸರ್ಕಾರದವರು ನ್ಯಾಯ ಬೆಲೆಯ ಅಂಗಡಿಗಳಲ್ಲಿ ದೊರೆಯುವ ಅಕ್ಕಿಯ ಬೆಲೆಯನ್ನು ಸಾಕಷ್ಟು ಇಳಿಸಿದ್ದಾರೆ. ಪ್ರಸಕ್ತ ವರ್ಷ ದಷ್ಟಕ್ಕಿ ಬೆಲೆಯನ್ನು ಕೆ.ಜಿ.ಗೆ 25 ಪೈಸೆ ಕಡಿಮೆ ಮಾಡಿದುದರಿಂದ ಅಕ್ಕಿ ಬೆಲೆಯು ಕೆ.ಜಿ.ಗೆ 1.65 ರೂಪಾಯಿಯಿಂದ ಕೆ.ಜಿ.ಗೆ 1.40 ರೂಪಾಯಿಗೆ ಇಳಿಯಿತು. ಇದೇ ರೀತಿಯಾಗಿ ಉತ್ತಮ ದರ್ಜೆಯ ಅಕ್ಕಿಯ ಬೆಲೆಗಳನ್ನೂ ಇಳಿಸಲಾಯಿತು. ಸಾರ್ವಜನಿಕ ವಿತರಣಾ ಪದ್ಧತಿಯ ಮೇರೆಗೆ ಹೆಚ್ಚು ಹೆಚ್ಚು ಜನರಿಗೆ ಧಾನ್ಯ ಒದಗಿಸುವ ಕ್ರಮವು ದಿನೇ ದಿನೇ ತೀವ್ರವಾಗಿ ವಿಸ್ತರಣವಾಗುತ್ತಿದೆ ಎಂಬುದು ಸಂತೋಷದ ಸಂಗತಿ. ಉದಾಹರಣೆಗೆ, ನ್ಯಾಯ ಬೆಲೆಯ ಅಂಗಡಿಗಳ ಮೂಲಕ ಮಾರಾಟ ಮಾಡಿದ ಅಕ್ಕಿಯ ಪ್ರಮಾಣವು ಫೆಬ್ರುವರಿ 1977ರಲ್ಲಿ 5,314 ಟನ್ನುಗಳಷ್ಟು ಆಗಿದ್ದರೆ, ಇದು 1978ರ ಫೆಬ್ರುವರಿಯಲ್ಲಿ 11,052 ಟನ್ನುಗಳ ಪ್ರಮಾಣಕ್ಕೆ ಏರಿತು. ಸದ್ಯ ನಮ್ಮ ಬಳಿ 1.72 ಲಕ್ಷ ಟನ್ನುಗಳಷ್ಟು ಬತ್ತ ಮತ್ತು 0,000 ಟನ್ನುಗಳಷ್ಟು ಅಕ್ಕಿ ದಾಸ್ತಾನು ಇದೆ. ಈ ದಾಸ್ತಾನು ಸ್ಥಿತಿಯು ತೃಪ್ತಿಕರವಾಗಿದ್ದು, ಬೆಲೆಯ ಮಟ್ಟವನ್ನು ಕಾಪಾಡಿಕೊಳ್ಳಲು ಸಾಕಷ್ಟು ಜಾಗರೂಕತೆಯಿಂದ ದಾಸ್ತಾನುಗಳನ್ನು ಬಳಸಿಕೊಳ್ಳಲಾಗುವುದು. ಕರ್ನಾಟಕದಲ್ಲಿ ಕಾರ್ಮಿಕ ವರ್ಗದ ಬಳಕೆದಾರರ ಬೆಲೆ ಸೂಚ್ಯಂಕವು 1977ರ ಮಾರ್ಚ್ ಮತ್ತು ಅಕ್ಟೋಬರ್ ತಿಂಗಳ ಮಧ್ಯದಲ್ಲಿ ಕೇವಲ ಶೇ. 1ರಿಂದ ಶೇ. 3ರಷ್ಟು ಹೆಚ್ಚಾಗಿತ್ತೆಂದೂ ಆದರೆ, ಇದಕ್ಕೆ ಪ್ರತಿಯಾಗಿ, ಇಡೀ ದೇಶದ ಸರಾಸರಿ ಪ್ರಮಾಣವು ಶೇ. 6ರಷ್ಟು ಹೆಚ್ಚಾಯಿತೆಂದೂ ನಾನು ಹೇಳಬಯಸುತ್ತೇನೆ.

7. ದುರ್ದೈವದಿಂದ 1977–78ರಲ್ಲಿ ಮುಂಗಾರು ಮಳೆಯು ಸಾಕಷ್ಟು ಬೀಳದಿದ್ದುದರಿಂದ ನಮ್ಮ ಆರ್ಥಿಕ ಸ್ಥಿತಿಯು ಹದಗೆಟ್ಟಿತು. ಮೊದಲನೆಯದಾಗಿ ವಿದ್ಯುತ್ ಉತ್ಪಾದನೆಯಲ್ಲಿ ತೀವ್ರ ಕೊರತೆ ಸಂಭವಿಸಿ ಒಂದು ಹಂತದಲ್ಲಿ ವಿದ್ಯುತ್ ಪೂರೈಕೆಯಲ್ಲಿ ಶೇಕಡಾ 55ರಷ್ಟು ಕಡಿತ ಮಾಡಬೇಕಾಗಿ ಬಂತು. ಈ ಕಡಿತದಿಂದ ಅನೇಕ ದುಷ್ಪರಿಣಾಮಗಳು ಉಂಟಾದವು. ಸರಿಯಾಗಿ ಕೆಲಸಮಾಡುತ್ತಿದ್ದ ಅನೇಕ ಉದ್ಯಮಗಳು ತೊಂದರೆಗೆ ಈಡಾದವು. ಕೆಲವಂತೂ ಕುಸಿದು ಬಿದ್ದವು. ಉದ್ಯಮ ಪ್ರಗತಿಯು ಬಹುಮಟ್ಟಿಗೆ ಕುಂಠಿತವಾಯಿತು. 1976ರಲ್ಲಿ ತಿಂಗಳಿಗೆ 1.38 ಲಕ್ಷ ಟನ್ನುಗಳಷ್ಟು ಸರಾಸರಿ ಉತ್ಪಾದನೆ ಹೊಂದಿದ್ದ ಸಿಮೆಂಟ್ ಉತ್ಪಾದನೆಯು 1977ರಲ್ಲಿ ಅಷ್ಟಕ್ಕೇ ನಿಂತಿತು. ಸಕ್ಕರೆ ಉತ್ಪಾದನೆಯು ಸುಮಾರು 27 ಸಾವಿರ ಟನ್ನುಗಳಿಂದ 21,500 ಟನ್ನುಗಳಿಗೆ ಮತ್ತು ಕಾಗದದ ಉತ್ಪಾದನೆಯು 8,000 ಟನ್ನುಗಳಿಂದ 7,400 ಟನ್ನುಗಳಿಗೆ ಇಳಿಯಿತು. ಈ ಎಲ್ಲ ತೊಂದರೆಗಳು ಇದ್ದಾಗ್ಯೂ ಹೊಸ ಔದ್ಯಮಿಕ ಚಟುವಟಿಕೆಗಳು ಕುಗ್ಗಲಿಲ್ಲ ಎಂಬುದೊಂದೇ ಸಂತೋಷದ ಸಂಗತಿ. 1976ರಲ್ಲಿ ಬಂಡವಾಳ ಹೂಡಿಕೆಯು 214 ಕೋಟಿ ರೂಪಾಯಿಯಷ್ಟಾಗಿತ್ತು. ಇದಕ್ಕೆ ಪ್ರತಿಯಾಗಿ 1977ರಲ್ಲಿ ಮೊದಲನೆಯ 10 ತಿಂಗಳಲ್ಲಿಯೇ ಸುಮಾರು 217 ಕೋಟಿ ರೂಪಾಯಿಯಷ್ಟು ಬಂಡವಾಳ ಹೂಡಿಕೆಗೆ ಆಶಯಪತ್ರಗಳನ್ನು ಕೊಡಲಾಯಿತು.

8. ಮಳೆ ಬೀಳದಿದ್ದುದರ ಎರಡನೆಯ ದುಷ್ಪರಿಣಾಮ ಎಂದರೆ ರಾಜ್ಯದ ಬಹು ಭಾಗಗಳಲ್ಲಿ ಅಭಾವದ ಸ್ಥಿತಿಗತಿಗಳೇ ಮುಂದುವರಿದು ವಿಶೇಷವಾಗಿ ದುರ್ಬಲ ವರ್ಗದವರಿಗೆ ಬಹಳ ತೊಂದರೆಯಾಯಿತು. ಈ ಸದನಕ್ಕೆ ಗೊತ್ತಿದ್ದಂತೆ, ಅಭಾವ ಪರಿಸ್ಥಿತಿಯು 1976–77 ರಲ್ಲಿ ಕಾಣಿಸಿಕೊಂಡಿತ್ತು. 1977-78ರಲ್ಲಿ

ನಾವು ಮತ್ತೆ ಮಾಮೂಲು ಸ್ಥಿತಿಗತಿಗಳಿಗೆ ಹಿಂದಿರುಗಬಹುದೆಂದು ಆಶಿಸಿದ್ದೆವು. ಆದರೆ ದುರ್ದೈವದಿಂದ ನಮ್ಮ ನಿರೀಕ್ಷೆಯು ಸುಳ್ಳಾಯಿತು, 1976–77 ನಲ್ಲಿ ಪರಿಹಾರ ಕಾಮಗಾರಿಗಳಿಗಾಗಿ ಸುಮಾರು 22 ಕೋಟಿ ರೂಪಾಯಿ ವೆಚ್ಚ ಮಾಡಬೇಕಾಯಿತು. 1977–78ರಲ್ಲಿ ಮಳೆಗಾಲದ ಕೊನೆ ಕೊನೆಯಲ್ಲಿ ಸ್ವಲ್ಪ ಮಳೆ ಬಿದ್ದುದರಿಂದ ಪರಿಸ್ಥಿತಿ ಸುಧಾರಿಸಿ ಸುಮಾರು 11 ಕೋಟಿ ರೂಪಾಯಿಯಷ್ಟು ಮಾತ್ರ ವೆಚ್ಚವಾಯಿತು. ಸರ್ಕಾರದ ಮತ್ತು ಅದರ ಅಭಿವೃದ್ಧಿ ಕಾರ್ಯಕ್ರಮಗಳ ದೃಷ್ಟಿಯಿಂದ ಇಂಥ ನೈಸರ್ಗಿಕ ವಿಪತ್ತುಗಳು ಅತ್ಯಂತ ಅನಪೇಕ್ಷಣೀಯವಾಗಿವೆ; ಇವುಗಳಿಂದ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗವಾಗಬಹುದಾಗಿದ್ದ ನಮ್ಮ ಸಂಪನ್ಮೂಲಗಳು ಪರಿಹಾರ ಕಾಮಗಾರಿಗಳಿಗಾಗಿ ಹಂಚಿಹೋಗುತ್ತವೆ. ಭಾರತ ಸರ್ಕಾರದವರು ನಮಗೆ ಯೋಜನಾ ಸಹಾಯ ರೂಪವಾಗಿ ಮುಂಗಡ ಹಣ ಕೊಟ್ಟಿರುವುದೇನೋ ನಿಜ. ಆದರೆ ಯಾವ ವಿಶಿಷ್ಟ ಸಂದರ್ಭದಲ್ಲಿ ಎಷ್ಟು ಹಣ ಕೊಡುವರೆಂಬುದನ್ನು ನಿಷ್ಕೃಷ್ಟವಾಗಿ ನಿರೀಕ್ಷಿಸುವುದು ಸಾಧ್ಯವಾಗುವುದಿಲ್ಲ. ಆರನೇ ಆರ್ಥಿಕ ಆಯೋಗದವರು ಪರಿಹಾರ ಕಾಮಗಾರಿಗಳಿಗಾಗಿ ವಿಶೇಷ ಅವಕಾಶ ಕಲ್ಪಿಸುವ ಅಗತ್ಯತೆಯನ್ನು ಮನಗಂಡಿದ್ದರು ಮತ್ತು ನಮ್ಮ ರಾಜ್ಯಕ್ಕೆ ಇಡೀ 5ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಯೋಜನೇತರ ವೆಚ್ಚಕ್ಕಾಗಿ 9.55 ಕೋಟಿ ರೂಪಾಯಿ ಹಣ ಒದಗಿಸುವ ಭರವಸೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ನಾವು 4 ವರ್ಷಗಳ ಅವಧಿಯಲ್ಲಿ ಯೋಜನೇತರ ಕ್ಷೇತ್ರದಲ್ಲಿ 16.34 ಕೋಟಿ ರೂಪಾಯಿ ವೆಚ್ಚ ಮಾಡಿದ್ದೇವೆ. 1976–77 ರಲ್ಲಿ ನಾವು ಪರಿಹಾರ ಕಾಮಗಾರಿಗಳನ್ನು ಕೈಗೊಂಡು ಖಾಯಂ ಸ್ವರೂಪದ ಕಾಮಗಾರಿಗಳನ್ನು ನಿರ್ಮಿಸಿರುವ ಮಟ್ಟಿಗೆ ನಮ್ಮ ಚಟುವಟಿಕೆಗಳು ನಿಜಕ್ಕೂ ಅಭಿವೃದ್ಧಿ ರೂಪದ ಕಾರ್ಯಕ್ರಮಗಳಾಗಿವೆಯೆಂದು ಭಾರತ ಸರ್ಕಾರದವರು ಪರಿಗಣಿಸಿದ್ದಾರೆ. ಅಂತೆಯೇ ಯೋಜನಾ ಕ್ಷೇತ್ರದಲ್ಲಿ 1976–77 ರಿಂದ 21.85 ಕೋಟಿ ರೂಪಾಯಿ ವೆಚ್ಚ ಮಾಡಲಾಗಿದೆ.

9. ಭಾರತ ಸರ್ಕಾರದವರು ಪರಿಹಾರ ಕಾಮಗಾರಿಗಳಿಗಾಗಿ ಸಹಾಯ ನೀಡುವಾಗಲೂ ಅದರ ಶೇಕಡ 70 ರಷ್ಟು ಹಣವನ್ನು ಸಾಲ ರೂಪದಲ್ಲಿ ನೀಡುತ್ತಿದ್ದಾರೆ, ಅಂದರೆ ವಾಡಿಕೆ ಯೋಜನಾ ವೆಚ್ಚದ ಆಧಾರದ ಮೇಲೆಯೇ ಸಹಾಯ ನೀಡುತ್ತಿದ್ದಾರೆ ಎಂದು ನಾನು ಈ ಹಂತದಲ್ಲಿ ಹೇಳಬಯಸುತ್ತೇನೆ. ಪರಿಹಾರ ಕಾಮಗಾರಿಗಳು ಅನಿರೀಕ್ಷಿತವಾದ ಮತ್ತು ಉಚಿತವಾಗಿ ನಿರ್ವಹಿಸಬೇಕಾದ ದೊಡ್ಡ ಪ್ರಮಾಣದ ವೆಚ್ಚಗಳನ್ನು ಒಳಗೊಳ್ಳುವುದರಿಂದ ಈ ಸ್ಥಿತಿಯು ಸುಸಂಗತವೆನಿಸುವುದಿಲ್ಲ. ಇಂತಹ ಸಾಲಗಳನ್ನು ಮರುಪಾವತಿ ಮಾಡುವುದು ಕಷ್ಟಸಾಧ್ಯವಾಗುವುದಲ್ಲದೆ ರಾಜ್ಯ ಸರ್ಕಾರಗಳಿಗೆ ಇದಕ್ಕೆ ತಕ್ಕ ಸಂಪನ್ಮೂಲಗಳನ್ನು ಒದಗಿಸಿಕೊಳ್ಳುವ ಸಮಸ್ಯೆಗಳೂ ಉದ್ಭವಿಸುವುವು. ಪರಿಹಾರ ಕಾಮಗಾರಿಗಳಿಗಾಗಿ ಭಾರತ ಸರ್ಕಾರದವರು ನೀಡುವ ಸಹಾಯವು ಸಂಪೂರ್ಣವಾಗಿ ಅನುದಾನಗಳ ಸ್ವರೂಪದಲ್ಲಿ ಇರಬೇಕೆಂಬುದು ಯುಕ್ತವಾಗಿದೆ. ಆದ್ದರಿಂದ ಪರಿಹಾರ ಕಾಮಗಾರಿಗಳಿಗೆ ಹಣ ಒದಗಿಸುವಾಗ ವಾಡಿಕೆಯ ಯೋಜನಾ ಸಹಾಯದ ಸಂಬಂಧದಲ್ಲಿ ಅನುಸರಿಸುವ 70:30 ರ ಸಾಲ ಮತ್ತು ಅನುದಾನಗಳ ದಾಮಾಷಾ ಪ್ರಮಾಣವನ್ನು ಅನ್ವಯಿಸುವುದು ನ್ಯಾಯವಾಗಲಾರದು.

10. ಈ ಮೊದಲೇ ಹೇಳಿದಂತೆ, ಮೇಲ್ಕಂಡ ಕಾರ್ಯಕ್ರಮಗಳ ವಾಡಿಕೆಯ ಚಟುವಟಿಕೆಗಳನ್ನು ಹೆಚ್ಚಿಸುವುದಕ್ಕಾಗಿ ಯೋಜನಾ ಬಾಬುಗಳಿಂದ 11 ಕೋಟಿ ರೂಪಾಯಿ ಹಣವನ್ನು ವಿವಿಧ ಪರಿಹಾರ ಕಾಮಗಾರಿಗಳಿಗಾಗಿ ನಾವು ವೆಚ್ಚ ಮಾಡಿದ್ದೇವೆ. ಕೊರೆ ಬಾವಿಗಳ ನಿರ್ಮಾಣ, ಗ್ರಾಮಾಂತರ ಪ್ರದೇಶಗಳಲ್ಲಿ ಉದ್ಯೋಗಾವಕಾಶ ಕಲ್ಪಿಸುವುದು ಮತ್ತು ಭೂಸಾರ ರಕ್ಷಣೆ—ಈ ಕಾರ್ಯಕ್ರಮಗಳಿಗೆ ನಾವು ಹೆಚ್ಚು ಗಮನ ನೀಡಿದ್ದೇವೆ. ಭೂಸಾರ ರಕ್ಷಣೆಗೆ ಬಜೆಟ್‌ನಲ್ಲಿ ಮೊದಲು 1.52 ಕೋಟಿ ರೂಪಾಯಿ ಒದಗಿಸಲಾಗಿದ್ದು, ನದೀ ಕಣಿವೆಗಳ ಕಾಮಗಾರಿಗಳೂ ಸೇರಿ ಈ ಬಗ್ಗೆ ಅಂತಿಮವಾಗಿ ಹೂಡಬೇಕಾದ ಹಣ ಸುಮಾರು 5.83 ಕೋಟಿ ರೂಪಾಯಿ ಆಗುವುದು. ಇದೇ ಪ್ರಕಾರ, ಕೊರೆ ಬಾವಿಗಳಿಗೆ ಮೊದಲು 2.45 ಕೋಟಿ ರೂಪಾಯಿ ಒದಗಿಸಲಾಗಿತ್ತು; ಆದರೆ ಈಗ ಅದು ಸುಮಾರು 6.45 ಕೋಟಿ ರೂಪಾಯಿಗೆ ಹೆಚ್ಚುವ ನಿರೀಕ್ಷೆ ಇದೆ. ಪ್ರಸಕ್ತ ವರ್ಷ 7,941 ಕೊರೆ ಬಾವಿಗಳನ್ನು ನಿರ್ಮಿಸಲಾಗಿದೆ ಮತ್ತು ಆ ಪೈಕಿ 6,450 ಕೊರೆ ಬಾವಿಗಳಲ್ಲಿ ನೀರು ಬಿದ್ದಿದೆ. ಪ್ರಾರಂಭದಲ್ಲಿ 3,750 ಕೊರೆ ಬಾವಿಗಳನ್ನು ನಿರ್ಮಿಸುವ ಗುರಿಯನ್ನು ಇಟ್ಟುಕೊಂಡಿದ್ದೆವು. ಯಾವ ಪ್ರಮಾಣದಿಂದ ಪರಿಶೀಲಿಸಿದರೂ ಇದೊಂದು ಉತ್ತಮ ಸಾಧನೆ ಎಂಬುದನ್ನು ಈ ಸದನವು ಒಪ್ಪಿಕೊಳ್ಳುವುದೆಂದು ಆಶಿಸುತ್ತೇನೆ.

11. ಪರಿಹಾರ ಕಾಮಗಾರಿಗಳ ಅಂಗವಾಗಿ, ಇದೇ ಪ್ರಕಾರ ಸಣ್ಣ ಪ್ರಮಾಣದ ನೀರಾವರಿಗೆ 2 ಕೋಟಿ ರೂಪಾಯಿಗೂ ಮೀರಿ ಮತ್ತು ರಸ್ತೆಗಳ ನಿರ್ಮಾಣಕ್ಕೆ ಸುಮಾರು ಒಂದು ಕೋಟಿ ರೂಪಾಯಿ ವೆಚ್ಚ ಮಾಡಲಾಗಿದೆ. ಅಭಾವ ಪರಿಸ್ಥಿತಿಯಲ್ಲಿ ಪ್ರತಿಯೊಬ್ಬ ನಿರುದ್ಯೋಗಿಗೂ ಉದ್ಯೋಗಾವಕಾಶ ದೊರೆಯಲೆಂಬುದೇ ನಮ್ಮ ಉದ್ದೇಶವಾಗಿತ್ತು.

12. ಮೇಲೆ ಹೇಳಿದ ಕಾರಣಗಳಿಂದಾಗಿ ಈ ವರ್ಷ ರಾಜ್ಯದ ಆರ್ಥಿಕ ಸ್ಥಿತಿ ತೀವ್ರ ಒತ್ತಡಕ್ಕೊಳಗಾಗಿದೆ. ಆದರೂ ಸಹ, ದುರ್ಬಲ ವರ್ಗದ ಜನರ ಹಿತ ದೃಷ್ಟಿಯಿಂದ ಅವರ ಕ್ಷೇಮಾಭಿವೃದ್ಧಿಗಾಗಿ ವಿಶೇಷ ಕ್ರಮಗಳನ್ನು ಕೈಕೊಳ್ಳಲಾಗಿದೆ. ಈ ಕ್ರಮಗಳಾವುವೆಂಬುದನ್ನು ವಿವರವಾಗಿ ನಾನು ಮುಂದೆ ತಿಳಿಸಲಿದ್ದೇನೆ. ಈ ಸ್ಥಿತಿಯಲ್ಲಿ ನಾವು ಕೈಕೊಂಡಿರುವ ಕ್ರಮದ ನ್ಯಾಯಯುಕ್ತತೆಯ ಬಗ್ಗೆ ನಮಗೆ ಯಾವ ಸಂದೇಹವೂ ಇಲ್ಲದಿದ್ದರೂ ಆ ಸಂಪನ್ಮೂಲಗಳನ್ನು ಇದಕ್ಕಿಂತಲೂ ಉತ್ತಮ ರೀತಿಯಲ್ಲಿ ಎಂದರೆ ವಿದ್ಯುಚ್ಛಕ್ತಿ ಮತ್ತು ನೀರಾವರಿಯ ಬಗ್ಗೆ ಬಳಸಬಹುದಾಗಿತ್ತೆಂದು ಭಾರತ ಸರ್ಕಾರದ ಅಭಿಪ್ರಾಯವಿರುವಂತಿದೆ. ಭವಿಷ್ಯದಲ್ಲಿ ಹೆಚ್ಚು ಹೆಚ್ಚು ಸಂಪನ್ಮೂಲಗಳನ್ನು ದೊರಕಿಸಿಕೊಳ್ಳುವುದಕ್ಕಾಗಿ, ಬೇರೆ ವಿಷಯಗಳೊಂದಿಗೆ ವಿದ್ಯುಚ್ಛಕ್ತಿ, ನೀರಾವರಿ ಮೊದಲಾದ ವಲಯಗಳನ್ನು ಬಲಪಡಿಸಬೇಕೆಂಬ ಅಂಶವು ನಿರ್ವಿವಾದವಾಗಿದ್ದರೂ, ಯಾವುದೇ ರಾಜ್ಯವು ಆರ್ಥಿಕ ಹಾಗೂ ಸಾಮಾಜಿಕ ಸೇವೆಗಳಲ್ಲಿ ಹೊಂದಾಣಿಕೆ ಮಾಡಲೇಬೇಕಾಗುತ್ತದೆಂಬುದನ್ನು ಅಲ್ಲಗಳೆಯುವಂತಿಲ್ಲ. ಇದನ್ನು ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಕೇವಲ ಯಾಂತ್ರಿಕ ರೀತಿಯ ಆರ್ಥಿಕ ಅಭಿವೃದ್ಧಿಗಾಗಿ ಮಾನವ ಮತ್ತು ಅವನ ಪರಿಸರದ ಅಭಿವೃದ್ಧಿಯ ಪ್ರಾಮುಖ್ಯತೆಯನ್ನು ಕಡೆಗಣಿಸುವಂತಿಲ್ಲ. ಇಂದು ಅತ್ಯಂತ ಅವಶ್ಯವಾಗಿರುವ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ ಇವುಗಳೊಳಗೆ ಒಂದು ಹೊಂದಾಣಿಕೆಯನ್ನು ತರುವುದು ಅತಿ ಕಷ್ಟಸಾಧ್ಯವೆಂಬುದು ಪ್ರತಿಯೊಂದು ರಾಜ್ಯದ ಅನುಭವಕ್ಕೆ ಬಂದಿದೆ. ಆರ್ಥಿಕ ರಂಗದಲ್ಲಿ ಅತ್ಯುತ್ತಮ ವ್ಯವಸ್ಥೆ ಹೊಂದಿರುವ ಕರ್ನಾಟಕ ರಾಜ್ಯವೂ ಇದಕ್ಕೆ ಅಪವಾದವಲ್ಲ.

13. ಈ ಸಂಗತಿಯನ್ನು ಮನಗಂಡು ಭಾರತ ಸರ್ಕಾರವು ಬೇರೆ ಬೇರೆ ರಾಜ್ಯಗಳಿಗೆ ನಿಗದಿಯಾಗಿರುವ ಒಟ್ಟು 414 ಕೋಟಿ ರೂಪಾಯಿ ಮೊತ್ತದಿಂದ ಕರ್ನಾಟಕ ರಾಜ್ಯಕ್ಕೆ 1977-78ರಲ್ಲಿ 17 ಕೋಟಿ ರೂಪಾಯಿಗಳ ವಿಶೇಷ ಸಹಾಯವನ್ನು ನೀಡಿರುವುದಕ್ಕಾಗಿ ನಾವು ಅವರಿಗೆ ಕೃತಜ್ಞರಾಗಿದ್ದೇವೆ. ಹೀಗಿದ್ದರೂ ಸಹ, ಭಾರತ ಸರ್ಕಾರದವರು ಅನುಸರಿಸಿದ ಸೂತ್ರ ಎಂದರೆ ಸಂಪನ್ಮೂಲಗಳ ಕೊರತೆಯ ಶೇಕಡಾ 50 ರಷ್ಟನ್ನು ಭರ್ತಿ ಮಾಡಿಕೊಡುವುದೆಂಬ ಅವರ ಸೂತ್ರವು ಅಷ್ಟೊಂದು ವೈಜ್ಞಾನಿಕವಲ್ಲ. ಏಕೆಂದರೆ ತಮ್ಮ ಸಂಪನ್ಮೂಲಗಳನ್ನು ವ್ಯವಸ್ಥಿತ ರೀತಿಯಲ್ಲಿ ನಿರ್ವಹಿಸದೆ ತೊಂದರೆಗೀಡಾದ ರಾಜ್ಯಗಳಿಗೂ ಈ ಸೂತ್ರದ ಮೇರೆಗೆ ಹೆಚ್ಚಿನ ಸಹಾಯ ದೊರೆಯಬಹುದಾಗಿದೆ. ಇಂಥ ಸಹಾಯವನ್ನು ನೀಡುವಾಗ ತಮ್ಮ ಸಂಪನ್ಮೂಲಗಳನ್ನು ಜಾಣತನದಿಂದ ನಿರ್ವಹಿಸಿದ ರಾಜ್ಯಗಳಿಗೆ ಪ್ರೋತ್ಸಾಹ ನೀಡಲು ಹೆಚ್ಚು ಪಾಲು ಕೊಡಬೇಕೆಂಬುದಾಗಿ ನಾವು ಆಗ್ರಹ ಪಡಿಸುತ್ತೇವೆ.

14. ಈ 17 ಕೋಟಿ ರೂಪಾಯಿಗಳ ಧನ ಸಹಾಯವಲ್ಲದೆ ಭಾರತ ಸರ್ಕಾರವು, ಭಾರೀ ಮತ್ತು ಮಧ್ಯಮ ಪ್ರಮಾಣದ ನೀರಾವರಿ ಬಗ್ಗೆ 11 ಕೋಟಿ ರೂಪಾಯಿಗಳ ವಿಶೇಷ ಧನಸಹಾಯವನ್ನೂ, ಸಣ್ಣ ನೀರಾವರಿ ಕಾಮಗಾರಿಗಳನ್ನು ತ್ವರೆಪಡಿಸುವ ಬಗ್ಗೆ 2 ಕೋಟಿ ರೂಪಾಯಿ ಮತ್ತು ಗ್ರಾಮೀಣ ನೀರು ಸರಬರಾಜನ್ನು ತ್ವರೆಪಡಿಸುವ ಬಗ್ಗೆ 1.40 ಕೋಟಿ ರೂಪಾಯಿಗಳ ಧನ ಸಹಾಯವನ್ನೂ ನೀಡಿದೆ.

15. 1978-79ನೇ ವರ್ಷವು ಆರನೇ ಯೋಜನೆಯ ಮೊದಲನೆಯ ವರ್ಷವೆಂಬುದನ್ನು ಈ ಮೊದಲೇ ತಮ್ಮ ಗಮನಕ್ಕೆ ತಂದಿದ್ದೇನೆ. ಹೊಸ ಯೋಜನೆ ನಿಶ್ಚಿತ ಸಮಯಕ್ಕಿಂತ ಒಂದು ವರ್ಷ ಮುಂಚಿತವಾಗಿಯೇ ಪ್ರಾರಂಭವಾಗಿದೆಯಲ್ಲದೆ ಯೋಜನಾ ಕ್ರಮದಲ್ಲಿ ಆಗಬಹುದಾದ ಪ್ರಗತಿ ಮತ್ತು ಸ್ಖಾಲಿತ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಿರಂತರವಾಗಿ ಯೋಜನೆಯ ವ್ಯಾಪ್ತಿಯನ್ನು ಹೊಂದಾಣಿಕೆ ಮಾಡಿಕೊಳ್ಳುವುದೇ ''ಆವರ್ತ ಯೋಜನೆ''ಯ ಕಲ್ಪನೆಯಾಗಿದೆ. ಈ ಹೊಸ ಕಲ್ಪನೆಯಲ್ಲಿ, ಯೋಜನಾ ಅವಧಿಯಲ್ಲಿಯೇ ಯೋಜನೆಯ ಗುರಿ ಸಾಧಿಸುವುದನ್ನು ರೂಪಿಸಿಕೊಳ್ಳುವುದಾಗಿದೆ. ಹಾಗಿದ್ದರೂ, ಯಾವುದೇ ಗುರಿಯಲ್ಲಿ ಆಗಾಗ ಮಾರ್ಪಾಡು ಮಾಡಿದರೆ, ದೀರ್ಘಕಾಲೀನ ಯೋಜನಾ ಕಲ್ಪನೆಗೆ ವ್ಯತಿರಿಕ್ತವಾಗುವ ಸಾಧ್ಯತೆಯನ್ನು ಉಪೇಕ್ಷಿಸುವಂತಿಲ್ಲ ಮತ್ತು ವಿಪರೀತ ಸಂದರ್ಭಗಳಲ್ಲಿ ವಾರ್ಷಿಕ ಯೋಜನೆಯನ್ನೇ ಪುನಃ ಅನುಸರಿಸಿದಂತಾಗಬಹುದು. ನೀರಾವರಿ ಮತ್ತು ವಿದ್ಯುಚ್ಛಕ್ತಿ ವಲಯಗಳಿಗೆ ಸ್ಪಷ್ಟವಾಗಿ ಒಟ್ಟು ಮೊತ್ತದ ವಿನಿಯೋಗವನ್ನು ಸೂಚಿಸಲಾಗಿರುವುದನ್ನು ಗಣನೆಗೆ ತೆಗೆದುಕೊಂಡರೆ, ವಾರ್ಷಿಕ ಯೋಜನೆಗಳಲ್ಲಿ ಹೊಂದಾಣಿಕೆಗೆ ಅವಕಾಶ ಬಹು ಕಡಿಮೆ. ಎರಡನೆಯದಾಗಿ, ಕೇಂದ್ರ ಸಹಾಯವು ಮತ್ತು ವಾಸ್ತವವಾಗಿ ಯೋಜನೆಗೆ ಹಣ ಒದಗಿಸುವ ರಾಜ್ಯ ಸರ್ಕಾರದ ಸಾಮರ್ಥ್ಯವು ಹೆಚ್ಚು ಕಡಿಮೆ ಸಂವಿಧಾನದ ಮೇರೆಗೆ ಪ್ರತಿ ಐದು ವರ್ಷಗಳಿಗೊಮ್ಮೆ ನೇಮಕ ಮಾಡಲಾಗುವ ಆರ್ಥಿಕ

ಆಯೋಗಗಳ ತೀರ್ಮಾನಗಳನ್ನು ಅವಲಂಬಿಸಿರುವುದರಿಂದ, 1978-79 ರಿಂದ ''ಆವರ್ತ'' ಯೋಜನೆಯನ್ನು ಪ್ರಾರಂಭಿಸುವುದು ವಸ್ತುತಃ ಒಂದು ಕಲ್ಪನೆಯಾಗಿಯೇ ಉಳಿಯಬಹುದು. ಮೂರನೆಯದಾಗಿ, ''ಆವರ್ತ'' ಯೋಜನೆಗಳ ಕಲ್ಪನೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದರಿಂದ, ಒಪ್ಪಿತ ವೆಚ್ಚಕ್ಕೆ ಸಂಬಂಧಿಸಿದಂತೆ ಸಮಸ್ಯೆಗಳು ಉಂಟಾಗುತ್ತವೆ ಮತ್ತು ರಾಜ್ಯ ಸರ್ಕಾರದ ಯೋಜನೇತರ ಅವಶ್ಯಕತೆಗಳನ್ನು ವೈಜ್ಞಾನಿಕವಾಗಿ ವರ್ಷೇ ವರ್ಷೇ ಅಂದಾಜು ಮಾಡಲು ತೊಂದರೆಯಾಗುತ್ತದೆ. ಏನೇ ಇರಲಿ, ಯೋಜನೇತರ ಅವಶ್ಯಕತೆಗಳಿಗೆ ಹಣ ಒದಗಿಸಿದ ತರುವಾಯ ಉಳಿಯುವ ಹಣವೇ ಯೋಜನಾ ಸಂಪನ್ಮೂಲಗಳು. ಆದರೂ ಈ ಹೊಸ ಕಲ್ಪನೆಯಿಂದ ೧೯೭೮-೭೯ರ ವಾರ್ಷಿಕ ಯೋಜನೆಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದು ನಾನು ಹೇಳಬಯಸುತ್ತೇನೆ.

೧೬. ಮುಂದಿನ ೧೦ ವರ್ಷಗಳಲ್ಲಿ ಈ ಕೆಳಕಂಡ ಗುರಿಗಳನ್ನು ಸಾಧಿಸುವಂತೆ ಯೋಜನಾ ಧ್ಯೇಯೋದ್ದೇಶಗಳನ್ನು ಪುನಃರೂಪಿಸುವುದೇ ಆರನೆಯ ಯೋಜನೆಯ ಉದ್ದೇಶವಾಗಿದೆ ;

(i) ನಿರುದ್ಯೋಗ ನಿವಾರಣೆ ಮತ್ತು ಉದ್ಯೋಗಾವಕಾಶವನ್ನು ಗಮನಾರ್ಹವಾಗಿ ಹೆಚ್ಚಿಸುವುದು.

(ii) ವಿವಿಧ ಜನವರ್ಗಗಳ ಜೀವನ ಮಟ್ಟದಲ್ಲಿ ಗಮನಾರ್ಹ ಸುಧಾರಣೆ ಮಾಡುವುದು ;

(iii) ಈ ಆದಾಯ ವರ್ಗದ ಜನರ ಮೂಲಭೂತ ಅಗತ್ಯಗಳ ಬಗ್ಗೆ ಎಂದರೆ ಶುದ್ಧ ಕುಡಿಯುವ ನೀರು, ವಯಸ್ಕರ ಶಿಕ್ಷಣ, ಪ್ರಾಥಮಿಕ ಶಿಕ್ಷಣ, ಆರೋಗ್ಯ ರಕ್ಷಣೆ, ಗ್ರಾಮಾಂತರ ರಸ್ತೆಗಳು, ಗ್ರಾಮೀಣ ಪ್ರದೇಶದಲ್ಲಿ ಭೂ ಹೀನರಿಗೆ ವಸತಿ ನಿರ್ಮಾಣ ಮತ್ತು ನಗರ ಕೊಳಚೆ ಪ್ರದೇಶಗಳಲ್ಲಿ ಕನಿಷ್ಠ ಸೇವಾ ಸೌಲಭ್ಯ—ಇವುಗಳ ಬಗ್ಗೆ ರಾಜ್ಯ ಸರ್ಕಾರವು ಏರ್ಪಾಡು ಮಾಡುವುದು.

ಈ ಮೂಲೋದ್ದೇಶಗಳು ಕೆಳಕಂಡ ಗುರಿಗಳಿಗೆ ಅನುಗುಣವಾಗಿರತಕ್ಕದೆಂದು ಇಲ್ಲಿ ಸ್ಪಷ್ಟಪಡಿಸಲಾಗಿದೆ. ಅವು ಯಾವುವೆಂದರೆ.—

(iv) ಆರ್ಥಿಕ ರಂಗದಲ್ಲಿ ಅಭಿವೃದ್ಧಿಯ ಗತಿಯನ್ನು ಹಿಂದಿಗಿಂತಲೂ ಹೆಚ್ಚಿಸುವುದು;

(v) ಆದಾಯ ಮತ್ತು ಸಂಪತ್ತುಗಳಲ್ಲಿ ಈಗಿರುವ ಅಸಮತೆಗಳನ್ನು ಗಮನಾರ್ಹವಾಗಿ ಕಡಿಮೆ ಮಾಡಲು ಕ್ರಮ ಕೈಕೊಳ್ಳುವುದು; ಮತ್ತು

(vi) ದೇಶವು ನಿರಂತರ ಸ್ವಾವಲಂಬನೆಯತ್ತ ಸಾಗುವಂತೆ ಕ್ರಮ ಕೈಕೊಳ್ಳುವುದು.

ಆದಾಯ ಹಂಚಿಕೆಯಲ್ಲಿನ ಅಸಮತೆಗಳ ನಿವಾರಣೆಯ ಮತ್ತು ನಿರುದ್ಯೋಗ ಪರಿಹಾರದ ವಿಷಯದಲ್ಲಿ ನಾವು ರಾಜ್ಯದಲ್ಲಿ ಈಗಾಗಲೇ ಸಾಕಷ್ಟು ಪ್ರಗತಿ ಸಾಧಿಸಿದ್ದೇವೆ. ಪ್ರಾಥಮಿಕ ಶಿಕ್ಷಣ, ಆರೋಗ್ಯ ವ್ಯವಸ್ಥೆ ಮತ್ತು ಕುಡಿಯುವ ನೀರಿನ ಪೂರೈಕೆ ಇವುಗಳಲ್ಲೂ ನಾವು ಸಾಕಷ್ಟು ಪ್ರಗತಿ ಸಾಧಿಸಿದ್ದೇವೆ. ತೀರ ಬಡವರ್ಗಗಳ ಜನತೆಯ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ನಮ್ಮ ಸರ್ಕಾರವು ಬದ್ಧವಾಗಿದೆ. ಆದ್ದರಿಂದ, ಆರನೇ ಪಂಚವಾರ್ಷಿಕ ಯೋಜನೆಯ ಉದ್ದೇಶಗಳನ್ನು ನಾವು ಮನಃಪೂರ್ವಕವಾಗಿ ಸ್ವಾಗತಿಸುತ್ತೇವೆ. ಒಟ್ಟಿನಲ್ಲಿ, ನಾವು ಫಲಿತಾಂಶಗಳನ್ನು ಅಳೆಯುವುದು ಉದ್ದೇಶಗಳ ಆಧಾರದ ಮೇಲಲ್ಲ; ಕಾರ್ಯಸಾಧನೆಯ ಆಧಾರದ ಮೇಲೆ.

೧೭. ನಾಲ್ಕು ವರ್ಷಗಳ ಅವಧಿಗೆ ಇಳಿಸಲಾಗಿರುವ ಐದನೆಯ ಪಂಚವಾರ್ಷಿಕ ಯೋಜನೆಗೆ ಮೂಲತಃ ೫ ವರ್ಷಗಳ ಅವಧಿಯಲ್ಲಿ ೮೮೬ ಕೋಟಿ ರೂಪಾಯಿ ವೆಚ್ಚವಾಗುವುದೆಂದು ಅಂದಾಜು ಮಾಡಲಾಗಿತ್ತು. ಆ ಬಳಿಕ ಅದನ್ನು ೯೪೮ ಕೋಟಿ ರೂಪಾಯಿಗಳಿಗೆ ಪರಿಷ್ಕರಿಸಲಾಯಿತು. ಈ ನಾಲ್ಕು ವರ್ಷಗಳ ಅವಧಿಯಲ್ಲೇ ವೆಚ್ಚವು ೭೯೦ ಕೋಟಿ ರೂಪಾಯಿಯಾಗುವುದು. ೧೯೭೮-೭೯ರ ಯೋಜನಾ ವೆಚ್ಚವನ್ನು ಸೇರಿಸಿದರೆ ಮೂಲತಃ ಅಂದಾಜು ಮಾಡಲಾದ ೮೮೬ ಕೋಟಿ ರೂಪಾಯಿಗೆ ಪ್ರತಿಯಾಗಿ ಆ ವೆಚ್ಚವು ಐದು ವರ್ಷಗಳ ಅವಧಿಯಲ್ಲಿ ೧೧೧೪ ಕೋಟಿ ರೂಪಾಯಿಯಾಗುವುದು. ನಾಲ್ಕು ವರ್ಷಗಳ ಅವಧಿಯಲ್ಲಿ; ಕಾವೇರಿ ಜಲಾನಯನ ಯೋಜನೆಗಳನ್ನು ಬಿಟ್ಟು ನೀರಾವರಿಗೆ ೧೩೭ ಕೋಟಿ ರೂಪಾಯಿ: ವಿದ್ಯುಚ್ಛಕ್ತಿಗೆ ೨೪೯ ಕೋಟಿ ರೂಪಾಯಿ; ವ್ಯವಸಾಯ ಮತ್ತು ಸಂಬಂಧಪಟ್ಟ ಸೇವೆಗಳಿಗೆ ೧೨೭ ಕೋಟಿ ರೂಪಾಯಿ ಮತ್ತು ಸಾಮಾಜಿಕ ಮತ್ತು ಸಾಮುದಾಯಿಕ ಸೇವೆಗಳಿಗೆ ೧೬೪ ಕೋಟಿ ರೂಪಾಯಿ ವೆಚ್ಚ ತಗಲುವುದು.

೧೮. ಯೋಜನಾ ವೆಚ್ಚದಲ್ಲಿ ಕಾವೇರಿ ಯೋಜನೆಯನ್ನು ಹೊರತುಪಡಿಸಿ, ಪ್ರಸಕ್ತ ವರ್ಷಕ್ಕಾಗಿ ಅನುಮೋದಿತ ಮೂಲ ವೆಚ್ಚವು ೨೩೦.೫೦ ಕೋಟಿ ರೂಪಾಯಿಯಾಗಿತ್ತು. ಅದನ್ನು ಈಗ ಭಾರತ ಸರ್ಕಾರದೊಂದಿಗೆ ಸಮಾಲೋಚಿಸಿ ೨೫೪ ಕೋಟಿ ರೂಪಾಯಿಗಳಿಗೆ ಪರಿಷ್ಕರಿಸಲಾಗಿದೆ. ಆದಾಗ್ಯೂ ವಾಸ್ತವ ವೆಚ್ಚವು ೨೬೩ ಕೋಟಿ ರೂಪಾಯಿಗಳಾಗುವುದು. ೧೯೭೭-೭೮ರಲ್ಲಿ ಕೈಕೊಂಡ ಹಲವಾರು ಸಮಾಜ ಕಲ್ಯಾಣ ಕಾರ್ಯಕ್ರಮಗಳಿಂದ ಈ ಹೆಚ್ಚಳವುಂಟಾಗಿದೆ. ಭಾರೀ ಮತ್ತು ಮಧ್ಯಮ ನೀರಾವರಿಗೆ ೫೫ ಕೋಟಿ ರೂಪಾಯಿ ; ವಿದ್ಯುಚ್ಛಕ್ತಿಗೆ ೬೭.೫೧ ಕೋಟಿ ರೂಪಾಯಿ ; ಸಣ್ಣ ನೀರಾವರಿಗೆ ೧೨.೧೫ ಕೋಟಿ ರೂಪಾಯಿ ಮತ್ತು ರಸ್ತೆ ಹಾಗೂ ಸೇತುವೆಗಳಿಗಾಗಿ ೮.೭೨ ಕೋಟಿ ರೂಪಾಯಿ ಅಂತಿಮ ವೆಚ್ಚವಾಗುವುದು.

೧೯. ರಾಜ್ಯದ ಹಿಂದುಳಿದ ವರ್ಗಗಳಿಗೆ ಸೌಕರ್ಯಗಳನ್ನು ಹಾಗೂ ಸಹಾಯಗಳನ್ನು ಹೆಚ್ಚಿಸಲು ಕೈಕೊಂಡ ವಿಶೇಷ ಕಾರ್ಯಕ್ರಮವು ಪ್ರಸಕ್ತ ವರ್ಷದಲ್ಲಿ ಸರ್ಕಾರವು ಸಾಧಿಸಿದ ಸಾಧನೆಗಳಲ್ಲಿ ಒಂದಾಗಿದೆ. ಇದನ್ನು ನಾವು ತೃಪ್ತಿಯಿಂದ ಸ್ಮರಿಸಬಹುದಾಗಿದೆ. ವಿಶೇಷ ಯೋಜನೆಯು ಬಹುವಾಗಿ ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗದ ಶಿಫಾರಸುಗಳ ಮೇಲೆ ಆಧಾರಿತವಾಗಿತ್ತು ಮತ್ತು ಈ ಕೆಳಕಂಡ ಯೋಜನೆಗಳನ್ನು ಒಳಗೊಂಡಿತ್ತು.—

(i) ನೇಮಕಾತಿಗಳಲ್ಲಿ ಶೇ. ೪೦ರ ವರೆಗೆ ಕಾದಿರಿಸುವಿಕೆಯ ಉದ್ದೇಶಕ್ಕಾಗಿ ಮತ್ತು ಶೈಕ್ಷಣಿಕ ಹಾಗೂ ಇತರ ವಿನಾಯಿತಿಗಳನ್ನು ನೀಡುವ ಉದ್ದೇಶಕ್ಕಾಗಿ ಭಾರತ ಸಂವಿಧಾನದ ೧೫(೪) ಮತ್ತು ೧೬(೪)ನೇ ಅನುಚ್ಛೇದದ ಮೇರೆಗೆ ಹಿಂದುಳಿದ ವರ್ಗಗಳ ವರ್ಗೀಕರಣ ;

(ii) ಹಿಂದುಳಿದ ವರ್ಗಗಳ ಆಯೋಗದ ಶಿಫಾರಸುಗಳ ಆಧಾರದ ಮೇಲೆ ಕೈಗೊಳ್ಳಲಾದ ನಿರ್ಣಯಗಳನ್ನು ಜಾರಿಗೆ ತರುವಲ್ಲಿ ಸರ್ಕಾರಕ್ಕೆ ಸಹಾಯ ಮಾಡಲು ಮತ್ತು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿಸುವುದಕ್ಕಾಗಿ ಜಾತಿಗಳು, ಕೋಮುಗಳು ಅಥವಾ ಇತರ ವಿಶೇಷ ಗುಂಪುಗಳ ಬೇಡಿಕೆಗಳನ್ನು ಪರಿಶೀಲಿಸಲು ಹಿಂದುಳಿದ ವರ್ಗಗಳಿಗಾಗಿ ಸಲಹಾಮಂಡಳಿಯನ್ನು ರಚಿಸುವುದು ಇತ್ಯಾದಿ ;

(iii) ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಆಯೋಗದ ಶಿಫಾರಸುಗಳನ್ನು ಕಾರ್ಯ ರೂಪಕ್ಕೆ ತರಲು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿರ್ದೇಶನಾಲಯದ ರಚನೆ ; ಮತ್ತು

(iv) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಕಾರ್ಪೊರೇಷನಿನ ಸ್ಥಾಪನೆ.

೨೦. ಈ ಶಿಫಾರಸುಗಳಿಗೆ ಅನುಸಾರವಾಗಿ ಸರ್ಕಾರವು ವಿವಿಧ ಯೋಜನೆಗಳನ್ನು ಜಾರಿಗೆ ತರುವ ಆದೇಶಗಳನ್ನು ಹೊರಡಿಸಿದೆ. ಹರಿಜನ ಮತ್ತು ಗಿರಿಜನರಿಗಾಗಿ ಶೇಕಡಾ ೧೮ರ ಮೀಸಲಾತಿ ಜೊತೆಗೆ ಹಿಂದುಳಿದ ವರ್ಗಗಳಿಗಾಗಿ ಶೇಕಡಾ ೪೦ರಷ್ಟು ಮೀಸಲಾತಿ ಜಾರಿಗೆ ತಂದಿದ್ದೇವೆ. ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಅವರ ಕುಟುಂಬದ ಆದಾಯವು ೧೦,೦೦೦ ರೂಪಾಯಿಗಳಿಗಿಂತ ಮೀರದಿದ್ದಲ್ಲಿ ಶಿಕ್ಷಣ ಮತ್ತು ಇತರ ಶುಲ್ಕಗಳನ್ನು ಕೊಡುವುದರಿಂದ ವಿನಾಯಿತಿ ಕೊಡಲಾಗಿದೆ. ಈ ಕಲ್ಯಾಣ ಯೋಜನೆಯನ್ನು ಜಾರಿಗೆ ತರುವುದರಿಂದ ರಾಜ್ಯದ ಬೊಕ್ಕಸಕ್ಕೆ ಜಮಾ ಬಾಬಿನಲ್ಲಿ ಸುಮಾರು ೨ ಕೋಟಿ ರೂಪಾಯಿಗಳಷ್ಟು ನಷ್ಟವಾಗಬಹುದು. ೨೦೦ ಪ್ರೀ-ಮೆಟ್ರಿಕ್ ಮತ್ತು ೪೦೦ ಪೋಸ್ಟ್-ಮೆಟ್ರಿಕ್ ಹಾಸ್ಟಲುಗಳನ್ನು ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನಗಳನ್ನು ಮಂಜೂರು ಮಾಡಲಾಗಿದೆ. ಹಿಂದುಳಿದ ವರ್ಗಗಳ ನಿರ್ದೇಶನಾಲಯ ಮತ್ತು ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಕಾರ್ಪೊರೇಷನ್‌ಗಳನ್ನು ಸಹ ರಚಿಸಲಾಗಿದೆ. ಪ್ರಾರಂಭಿಕ ವೆಚ್ಚಗಳೂ ಸೇರಿ, ಈ ಎಲ್ಲ ವೆಚ್ಚಗಳಿಗಾಗಿ ಪ್ರಸಕ್ತ ವರ್ಷ ಸುಮಾರು ೨.೫೦ ಕೋಟಿ ರೂಪಾಯಿ ವೆಚ್ಚವಾಗಬಹುದೆಂದು ಅಂದಾಜು ಮಾಡಲಾಗಿದೆ. ಹಿಂದುಳಿದ ವರ್ಗಗಳ ಸಲಹಾ ಸಮಿತಿಯನ್ನು ಸಹ ರಚಿಸಲಾಗಿದೆ. ಈ ಬೃಹತ್ ಪ್ರಯತ್ನವನ್ನು ಇನ್ನಾವುದೇ ರಾಜ್ಯವು ಮಾಡಿಲ್ಲವೆಂದು ನಾನು ಹೇಳಬಲ್ಲೆ. ಈ ಪ್ರಯತ್ನವನ್ನು ತೀವ್ರಗತಿಯಿಂದ ಮುಂದುವರಿಸುತ್ತೇವೆಂದು ಈ ಸದನಕ್ಕೆ ಭರವಸೆ ನೀಡುತ್ತೇನೆ.

೨೧. ಪ್ರಸಕ್ತ ವರ್ಷ ಸರಕಾರವು ಖಾಸಗಿ ಸಂಸ್ಥೆಗಳಲ್ಲಿ ಕೆಲಸ ಮಾಡುವ ಶಿಕ್ಷಕರಿಗೆ ಚೆಕ್ಕುಗಳ ಮೂಲಕ ವೇತನ ಸಂದಾಯ ಮಾಡುವ ಪದ್ಧತಿಯನ್ನು ಜಾರಿಗೆ ತಂದಿದೆ. ೧೯೭೭ನೇ ಸೆಪ್ಟೆಂಬರ್ ವರೆಗೆ ಸರಕಾರವು ಈ ಸಂಸ್ಥೆಗಳಿಗೆ ಶೇಕಡಾ ೮೦ರಷ್ಟು ನಿವ್ವಳ ಕೊರತೆಯನ್ನು ತುಂಬಿಕೊಡುತ್ತಿತ್ತು. ಇದು ಅಷ್ಟೊಂದು ತೃಪ್ತಿಕರ ವ್ಯವಸ್ಥೆ ಆಗಿದ್ದಿಲ್ಲ. (ನಿವ್ವಳ ಕೊರತೆಯನ್ನು ಗುರುತಿಸುವಲ್ಲಿ ಅಡಚಣೆಗಳಿದ್ದುದರಿಂದ ಅಕ್ರಮಗಳಿಗೂ ಅವಕಾಶವಿತ್ತು) ಆದ್ದರಿಂದ ಸರಕಾರವು ಸಂಸ್ಥೆಯ ಪ್ರಿನ್ಸಿಪಾಲರು ಮತ್ತು ಶಿಕ್ಷಣ ಇಲಾಖೆಯ ಸಂಬಂಧಪಟ್ಟ ಅಧಿಕಾರಿಯು ಇಟ್ಟುಕೊಂಡು ಬಂದಿರುವ ಜಂಟಿ ಖಾತೆಯಿಂದ ಶಿಕ್ಷಕರ ವೇತನದ ನೂರಕ್ಕೆ ನೂರರಷ್ಟು ವೇತನವನ್ನು ಸಂದಾಯ ಮಾಡಲು ನಿರ್ಧರಿಸಿತು. ಆ ಖಾತೆಗಳಿಗೆ ಪಾಠ ಶುಲ್ಕ ಮತ್ತು ಕಾಲೇಜುಗಳ ಪ್ರಯೋಗಾಲಯಗಳಿಂದ ಬಂದ ಜಮೆಗಳಿಗೆ ಪೂರಕವಾಗಿ ಸಾಕಷ್ಟು ನಿಧಿಗಳನ್ನು ಸರ್ಕಾರವು ಠೇವಣಿ ಮಾಡುವುದು.

೨೨. ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಾವರಿ ಯೋಜನೆಗಳಿಗೆ ಮೀಸಲಿಟ್ಟ ೨೨.೫೦ ಕೋಟಿ ರೂಪಾಯಿಯೂ ಸೇರಿದಂತೆ ೩೩೨ ಕೋಟಿ ರೂಪಾಯಿ ವೆಚ್ಚದ ೧೯೭೮-೭೯ರ ವಾರ್ಷಿಕ ಯೋಜನೆಗೆ ಮಂಜೂರಾತಿ ನೀಡಲಾಗಿದೆ. ಹಿಂದಿನ ವರ್ಷದ ವೆಚ್ಚಕ್ಕಿಂತ ೮೨.೫೦ ಕೋಟಿ ರೂಪಾಯಿಗಳಷ್ಟು ಭಾರಿ ಮೊತ್ತದ ಹೆಚ್ಚಳವಾಗಿದೆ. ಅಂದರೆ ಸುಮಾರು ಶೇ. ೩೩ರಷ್ಟು ಹೆಚ್ಚಳವಾದಂತಾಯಿತು. ೧೯೭೭-೭೮ನೇ ಸಾಲಿನ ಯೋಜನಾ ವೆಚ್ಚದ ಅಂತಿಮ ವೆಚ್ಚದ ಅಂದಾಜಿಗಿಂತಲೂ ೪೬ ಕೋಟಿ ರೂಪಾಯಿ ಅಥವಾ ಶೇಕಡಾ ೨೦ ರಷ್ಟು ಹೆಚ್ಚಾಗಿದೆ. ೧೯೭೮-೭೯ ರಲ್ಲಿ, ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗಾಗಿ ೬೯ ಕೋಟಿ ರೂಪಾಯಿ, ವಿದ್ಯುಚ್ಛಕ್ತಿಗಾಗಿ ೯೭ ಕೋಟಿ ರೂಪಾಯಿ, ಸಹಕಾರ ಹಾಗೂ ಸಣ್ಣ ನೀರಾವರಿಯೂ ಸೇರಿದಂತೆ ಕೃಷಿಗಾಗಿ ೫೨ ಕೋಟಿ ರೂಪಾಯಿಯನ್ನು ವೆಚ್ಚ ಮಾಡಲಾಗುವುದು, ಸಾಮಾಜಿಕ ಮತ್ತು ಸಾಮುದಾಯಿಕ ಸೇವೆಗಳಿಗೆ ಮಾಡಲಾಗುವ ವೆಚ್ಚ ೬೩.೨೨ ಕೋಟಿ ರೂಪಾಯಿ.

೨೩. ಭೂಸುಧಾರಣಾ ಕ್ಷೇತ್ರದಲ್ಲಿ ರಾಜ್ಯವು ಸಾಧಿಸಿದ ಗಮನಾರ್ಹ ಪ್ರಗತಿ ಮಾನ್ಯ ಸದಸ್ಯರಿಗೆಲ್ಲ ತಿಳಿದಿದೆ. ಸ್ವೀಕರಿಸಲಾಗಿದ್ದ ೭.೫ ಲಕ್ಷ ಗೇಣಿ ಅರ್ಜಿಗಳ ಪೈಕಿ ೧೯೭೭ರ ಡಿಸೆಂಬರ್ ತಿಂಗಳ ಕೊನೆಯ ಹೊತ್ತಿಗೆ ೩.೫ ಲಕ್ಷ ಅರ್ಜಿಗಳನ್ನು ವಿಲೇ ಮಾಡಲಾಗಿದೆ. ೨.೧೮ ಲಕ್ಷ ಪ್ರಕರಣಗಳು ಗೇಣಿದಾರರ ಪರವಾಗಿ ತೀರ್ಮಾನವಾಗಿವೆ ಹಾಗೂ ಈ ಪ್ರಕರಣಗಳಿಗೆ ಸಂಬಂಧಿಸಿದಂತೆ ಹಿಂದಿನ ಭೂ ಮಾಲೀಕರಿಗೆ ಹಣ ಸಂದಾಯವಾಗಬೇಕಾಗಿದೆ. ೩.೧೩ ಕೋಟಿ ರೂಪಾಯಿಯಷ್ಟನ್ನು ೧೪,೦೦೦ ಭೂ ಮಾಲೀಕರಿಗೆ ಸಂದಾಯ ಮಾಡಲಾಗಿದೆ. ಈ ಹಣದ ಪೈಕಿ ೨.೨೮ ಕೋಟಿ ರೂಪಾಯಿಯನ್ನು ೮,೦೧೬ ವಿಧವೆಯರು, ಅಪ್ರಾಪ್ತ ವಯಸ್ಕರು, ಸಣ್ಣ ಹಿಡುವಳಿದಾರರು ಮುಂತಾದವರಿಗೆ ನೀಡಲಾಗಿದೆ. (ಎ) ಅಪ್ರಾಪ್ತ ವಯಸ್ಕನಾದ ಅಥವಾ (ಬಿ) ವಿಧವೆಯಾದ ಅಥವಾ (ಸಿ) ಇತರ ಯಾವುದೇ ವರಮಾನ ಮೂಲವಿಲ್ಲದ ವ್ಯಕ್ತಿ ಅಥವಾ (ಡಿ) ಒಂದು ಹೆಕ್ಟೇರ್ ಖುಷ್ಕಿ ಭೂಮಿ ಅಥವಾ ಅದಕ್ಕೆ ಸಮನಾದ ವಿಸ್ತೀರ್ಣವನ್ನು ಮೀರದ ಹಿಡುವಳಿದಾರ - ಇವರೆಲ್ಲರಿಗೂ ಪೂರ್ಣವಾಗಿ ನಗದು ರೂಪದಲ್ಲಿ ಪರಿಹಾರ ಸಂದಾಯ ಮಾಡುವ ಉದ್ದೇಶ ನಮಗಿದೆ. ೧೯೭೮-೭೯ರಲ್ಲಿ ಭೂ ಸುಧಾರಣೆಗಳಿಗಾಗಿ ಅಂದರೆ ಪರಿಹಾರ ಸಂದಾಯಕ್ಕಾಗಿ ಒಟ್ಟು ೧೦ ಕೋಟಿ ರೂಪಾಯಿ ಹಣ ಒದಗಿಸಲಾಗಿದೆ.

೨೪. ಗ್ರಾಮೀಣ ಬಡ ಜನರಿಗೆ ಅತ್ಯಗತ್ಯವಾಗಿರುವ ವಸತಿ ನಿರ್ಮಾಣಕ್ಕಾಗಿ ೧೦ ಕೋಟಿ ರೂಪಾಯಿಯನ್ನು ಒದಗಿಸಿದ್ದೇನೆ. ಪ್ರತಿ ಮನೆಗೆ ೨,೫೦೦ ರೂಪಾಯಿಯ ವೆಚ್ಚದಲ್ಲಿ ಇದುವರೆಗೆ ೭೪,೧೫೬ ಮನೆಗಳನ್ನು ನಿರ್ಮಿಸಲಾಗಿದೆ. ಇದರ ಜತೆಗೆ ಕಡಿಮೆ ವೆಚ್ಚದ ಪ್ರಾಯೋಗಿಕ ವಸತಿ ಯೋಜನೆಯ ಮೇರೆಗೆ (ಪ್ರತಿ ಮನೆಗೆ ೧,೨೫೦ ರೂಪಾಯಿಯಂತೆ) ೮,೬೫೧ ಮನೆಗಳನ್ನು ನಿರ್ಮಿಸಲಾಗಿದೆ. ಪ್ರತಿ ಮನೆಗೆ ೨೫೦ ರೂಪಾಯಿಯ ವೆಚ್ಚದಲ್ಲಿ ೨೫,೭೨೭ ಗುಡಿಸಲುಗಳನ್ನು ಸಹ ನಿರ್ಮಿಸಲಾಗಿದೆ. (ಮೂರು ಬಗೆಯ ಮನೆಗಳೂ ಸೇರಿ) ೨೬,೦೦೦ ಮನೆಗಳ ನಿರ್ಮಾಣ ಕಾರ್ಯವು ಪ್ರಗತಿಯಲ್ಲಿದೆ, ಈ ವರದಿಯು ಡಿಸೆಂಬರ್, ೧೯೭೭ರ ಅಂತ್ಯದವರೆಗಿನದ್ದಾಗಿದೆ. ಯೋಜನೆಗಳ ಕಾರ್ಯರೀತಿಯನ್ನು ಸಹ ಸುಧಾರಿಸಬೇಕಾಗಿದೆ. ವಿಶೇಷವಾಗಿ ಸ್ವಸ್ಥಳದಿಂದ ಹೊಸ ವಸಾಹತುಗಳಿಗೆ ಹೋಗಲು ಸಾಧ್ಯವಿಲ್ಲದ, ಆದರೆ ತಮ್ಮ ಸ್ವಂತ ಸಣ್ಣ ಜಮೀನನ್ನು ಹೊಂದಿರುವ, ಕರಾವಳಿ ಪ್ರದೇಶದಲ್ಲಿರುವ ಬೆಸ್ತರ ಮತ್ತು ಸಣ್ಣ ರೈತರಂಥ ದುರ್ಬಲ ವರ್ಗಗಳವರಿಗೆ ಈ ಯೋಜನೆಗಳ ಅಂದರೆ

—ಗ್ರಾಮೀಣ ವಸತಿ ಯೋಜನೆ (೨,೫೦೦ ರೂಪಾಯಿ ವೆಚ್ಚ) ಮತ್ತು ಕೃಷಿಕರ ಮತ್ತು ಕೃಷಿ ಕಾರ್ಮಿಕರ ವಸತಿ ಯೋಜನೆ (೧,೨೫೦ ರೂಪಾಯಿ ವೆಚ್ಚ) ಇವುಗಳ ಪ್ರಯೋಜನಗಳನ್ನು ದೊರಕಿಸಿ ಕೊಡಲು ಪ್ರಯತ್ನಿಸುತ್ತೇವೆ.

೨೫. ನಾವು ಸಾಧಿಸಿದ ಪ್ರಗತಿಯು ಅಷ್ಟೊಂದು ಸಣ್ಣದೇನೂ ಅಲ್ಲ, ಈ ದಿಶೆಯಲ್ಲಿ ನಾವು ಉತ್ತಮ ಕಾರ್ಯಾರಂಭ ಮಾಡಿದ್ದೇವೆ ಮಾಡತಕ್ಕ ಕಾರ್ಯ ಇನ್ನೂ ಬಹಳಷ್ಟು ಇದೆ. ಅದಕ್ಕಾಗಿ ಭಾರತ ಸರ್ಕಾರದ ವಸತಿ ಮತ್ತು ನಗರಾಭಿವೃದ್ಧಿ ಕಾರ್ಪೊರೇಷನ್‌ನಿಂದ ಆರ್ಥಿಕ ಸಹಾಯವನ್ನು ಕೇಳಿದ್ದೇವೆ. ಕಾರ್ಪೊರೇಷನಿನ ಸಹಾಯ ದೊರೆತರೆ ೧೯೭೮-೭೯ರ ಅವಧಿಯಲ್ಲಿ ಸುಮಾರು ೫ ಕೋಟಿ ರೂಪಾಯಿ ವೆಚ್ಚದಿಂದ ಜನತಾ ವಸತಿ ಯೋಜನೆಯ ಮೇರೆಗೆ ಇನ್ನೂ ೫೦,೦೦೦ ಮನೆಗಳನ್ನು ನಿರ್ಮಿಸಬಹುದೆಂಬ ನಿರೀಕ್ಷೆ ಇದೆ.

೨೬. ಬೇಸಾಯವೇ ನಮ್ಮ ಜನತೆಯ ಪ್ರಧಾನ ವೃತ್ತಿ. ಈ ವೃತ್ತಿಯನ್ನು ಅನುಸರಿಸುವವರು ಸೂಕ್ತ ರೀತಿಯಲ್ಲಿ ಸುಸಂಘಟಿತರಾಗಬೇಕು; ಉತ್ತಮ ಕೃಷಿ ವಿಧಾನಗಳನ್ನು ಅನುಸರಿಸಬೇಕು; ಉತ್ಕೃಷ್ಟ ಬೀಜಗಳನ್ನು ಉಪಯೋಗಿಸಬೇಕು. ಅಲ್ಲದೆ ಕೃಷಿ ಹಾಗೂ ಸಂಗ್ರಹಣೆಯ ಸಂಬಂಧದಲ್ಲಿ ಉತ್ತಮ ವಿಧಾನಗಳನ್ನು ಅನುಸರಿಸಬೇಕು. ಕೃಷಿ-ಕಾರ್ಮಿಕರನ್ನೊಳಗೊಂಡಂತೆ, ಕೃಷಿಯಲ್ಲಿ ನಿರತರಾದ ಎಲ್ಲರನ್ನೂ ಸಂಘಟಿಸುವ ಉದ್ದೇಶದಿಂದ, ರೈತರ ಸಂಘಗಳನ್ನು ಸ್ಥಾಪಿಸಲು ನಾವು ಉದ್ದೇಶಿಸಿದ್ದೇವೆ. ಇದರಿಂದಾಗಿ ಅವರು ಕೃಷಿ ಉತ್ಪಾದನೆಯ ವಿವಿಧ ಹಂತಗಳ ಇನ್ನಷ್ಟು ಉತ್ತಮವಾಗಿ ಕಾರ್ಯ ನಿರ್ವಹಿಸಬಹುದು.

೨೭. ವೃದ್ಧಾಪ್ಯವೇತನ ಯೋಜನೆಯನ್ನು ಕಾರ್ಯರೂಪಕ್ಕೆ ತಂದ ರಾಜ್ಯಗಳಲ್ಲಿ ಕರ್ನಾಟಕವೇ ಮೊದಲನೆಯದು. ಸಮಾಜದ ದುರ್ಬಲ ವರ್ಗದ ಸಲುವಾಗಿಯೇ ಈ ಸೌಲಭ್ಯವನ್ನು ಏರ್ಪಡಿಸಲಾಗಿದೆ. ಈ ಯೋಜನೆಯ ವ್ಯಾಪ್ತಿಯು ವರ್ಷ ವರ್ಷವೂ ಬೆಳೆಯುತ್ತಿದೆ, ೧೯೭೭-೭೮ರಲ್ಲಿ, ೧.೮ ಲಕ್ಷ ಜನರು ಈ ಯೋಜನೆಯ ಪ್ರಯೋಜನ ಪಡೆದಿದ್ದಾರೆ ಮತ್ತು ಅದಕ್ಕಾಗಿ ೮.೫ ಕೋಟಿ ರೂಪಾಯಿ ವೆಚ್ಚವಾಗಿದೆ. ಈ ಬಾಬಿನಲ್ಲಿ, ೧೯೭೪-೭೫ರಲ್ಲಿ ಆಗಿರುವ ವೆಚ್ಚ ಸುಮಾರು ೧.೫ ಕೋಟಿ ರೂಪಾಯಿ ಎಂಬುದನ್ನು ಇಲ್ಲಿ ಹೋಲಿಸಿ ನೋಡಬಹುದು. ವೃದ್ಧಾಪ್ಯ ವೇತನದ ಮೊಬಲಗು ವರ್ಷಗಳು ಕಳೆದಂತೆ ತಿಂಗಳಿಗೆ ೧೫ ರೂಪಾಯಿಗಳಿಂದ, ತಿಂಗಳಿಗೆ ೪೦ ರೂಪಾಯಿಗಳವರೆಗೆ ಹೆಚ್ಚುತ್ತಾ ಬಂದಿದೆ. ಮಂಜೂರಾತಿಯ ಅಧಿಕಾರಗಳನ್ನು ಸಹ ಸಾಕಷ್ಟು ವಿಕೇಂದ್ರೀಕರಿಸಲಾಗಿದೆ. ೧೯೭೮-೭೯ರಲ್ಲಿ ಈ ಖರ್ಚು ೯ ಕೋಟಿ ರೂಪಾಯಿಗಳಾಗುವುದೆಂದು ನನ್ನ ನಿರೀಕ್ಷೆ.

೨೮. ಅಂಗವಿಕಲತೆಯಿಂದಾಗಿ ಸಂಪಾದನೆ ಮಾಡಲಾರದ ಮತ್ತು ಆರ್ಥಿಕವಾಗಿ ದುರ್ಬಲರಾದ ಕುರುಡರಿಗೆ, ಕುಷ್ಠ ರೋಗಿಗಳಿಗೆ ಮತ್ತು ದೈಹಿಕ ನ್ಯೂನತೆಗೆ ಈಡಾದ ವ್ಯಕ್ತಿಗಳಿಗೆ ಆರ್ಥಿಕ ಸಹಾಯ ನೀಡುವ ಯೋಜನೆಯೊಂದನ್ನು ರೂಪಿಸಿ ೧೯೭೭-೭೮ರಲ್ಲಿ ರಾಜ್ಯವು ಹೊಸ ಕ್ರಮವನ್ನು ಜಾರಿಗೆ ತಂದಿತು. ಈ ಯೋಜನೆಯು ೧೯೭೮-೭೯ರಲ್ಲಿಯೂ ಮುಂದುವರಿಯುವುದು.

೨೯. ೧೯೭೭-೭೮ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಮಧ್ಯಾಹ್ನ ಊಟದ ಕಾರ್ಯಕ್ರಮಕ್ಕೆ ಪೂರಕವಾಗಿ ಶಕ್ತಿವರ್ಧಕ ಆಹಾರ ತಯಾರಿಕೆಗೆ ಮತ್ತು ಅದರ ವಿತರಣೆಗೆ ಕ್ರಮ ಕೈಗೊಂಡಿತು. ಈ ಶಕ್ತಿವರ್ಧಕ ಆಹಾರ ತಯಾರಿಕಾ ಘಟಕಗಳನ್ನು ಸ್ಥಾಪಿಸುವಲ್ಲಿ ಸ್ವಲ್ಪ ವಿಳಂಬವಾಯಿತು, ಆದರೆ, ಪ್ರಸಕ್ತ ವರ್ಷ ಈ ಎಲ್ಲಾ ಅಡಚಣೆಗಳನ್ನು ನಿವಾರಿಸಲಾಗುವುದು. ಅಲ್ಲದೆ ಈ ಕಾರ್ಯಕ್ರಮವನ್ನು ತ್ವರಿತವಾಗಿ ಕಾರ್ಯಗತಗೊಳಿಸಲಾಗುವುದು. ಪೌಷ್ಟಿಕ ಆಹಾರ ಕಾರ್ಯಕ್ರಮಕ್ಕಾಗಿ ೧೯೭೭-೭೮ನೇ ಸಾಲಿನಲ್ಲಿ ೨.೪೦ ಕೋಟಿ ರೂಪಾಯಿ ವೆಚ್ಚಕ್ಕೆ ಅನುಮೋದನೆ ನೀಡಲಾಗಿತ್ತು. ಅದನ್ನು ೧೯೭೮-೭೯ರಲ್ಲಿ ೫.೮೭ ಕೋಟಿ ರೂಪಾಯಿಗೆ ಏರಿಸಲಾಗಿದೆ. ಭಾವಿ ಜನಾಂಗದ ಪೌಷ್ಟಿಕ ಆಹಾರದ ಅಗತ್ಯಗಳನ್ನು ಪೂರೈಸುವಲ್ಲಿ ನಮ್ಮ ಸರ್ಕಾರದವರು ತುಂಬ ಉತ್ಸುಕರಾಗಿದ್ದಾರೆಂಬುದನ್ನೂ ಅದಕ್ಕೆ ಇನ್ನೂ ಹೆಚ್ಚು ಗಮನ ಕೊಡುತ್ತಿದ್ದಾರೆಂಬುದನ್ನೂ ಮಾನ್ಯ ಸದಸ್ಯರು ಮನಗಾಣಬಹುದು.

೩೦. ನಿರುದ್ಯೋಗಿ ಪದವೀಧರರಿಗೆ ಮತ್ತು ಡಿಪ್ಲೊಮಾದಾರರಿಗೆ ಸ್ಟೈಪೆಂಡರಿ ಉದ್ಯೋಗ ಯೋಜನೆಯನ್ನು ಪ್ರಾರಂಭಿಸಿದ್ದೇವೆ. ಅವರ ಸೇವೆಯನ್ನು ವಿಶೇಷವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಬಳಸಿ ಕೊಳ್ಳಲಾಗುವುದು, ಅಂಥ ಪ್ರತಿಯೊಬ್ಬ ವ್ಯಕ್ತಿಯ

ವಿದ್ಯಾರ್ಹತೆ ಮುಂತಾದುವುಗಳನ್ನು ಗಮನಿಸಿ, ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಕರಿಗೆ ಸಹಾಯ ಮಾಡಲು, ಕೊರೆ ಬಾವಿಗಳ ರಿಪೇರಿ ಕೆಲಸದ ಉಸ್ತುವಾರಿ ನೋಡಲು ಅಥವಾ ಗ್ರಾಮೀಣ ಔಷಧಾಲಯಗಳಲ್ಲಿ ಸಹಾಯ ನೀಡಲು ಅವರ ಸೇವೆಯ ನೆರವನ್ನು ಪಡೆದುಕೊಳ್ಳಲಾಗುವುದು. ಸ್ಟೈಪೆಂಡರಿ ಉದ್ಯೋಗ ಯೋಜನೆಯು ದಾನ ಸ್ವರೂಪದ್ದೆಂದು ಭಾವಿಸಕೂಡದು. ಹಾಗೆ ಭಾವಿಸುವುದಾದರೆ ರಾಜ್ಯಕ್ಕೆ ಯಾವ ಪ್ರತಿಫಲವೂ ದೊರೆಯುವುದಿಲ್ಲ. ಅಲ್ಲದೆ ಹಾಗೆ ಸಹಾಯ ಪಡೆಯುವವನ ನೈತಿಕ ಬಲವು ಕುಗ್ಗುವುದು. ಗ್ರಾಮಾಂತರ ಪ್ರದೇಶಗಳಲ್ಲಿ ಸೇವಾ ಅಗತ್ಯವಿರುವ ಸೇವೆಗಳಿಗೂ ಅಲ್ಲಿ ಲಭ್ಯವಿರುವ ಜನ ಶಕ್ತಿಗೂ ಪರಸ್ಪರ ಹೊಂದಾಣಿಕೆ ಕಲ್ಪಿಸುವುದೇ ನಮ್ಮ ಉದ್ದೇಶವಾಗಿದೆ. ಈ ಉದ್ದೇಶಕ್ಕಾಗಿ ನಾನು ೨.೨೫ ಕೋಟಿ ರೂಪಾಯಿ ಒದಗಿಸಿದ್ದೇನೆ. ವಿದ್ಯಾವಂತ ನಿರುದ್ಯೋಗಿಗಳ ಪೈಕಿ ಉಳಿದವರಿಗೆ ಈ ಯೋಜನೆಯ ಅವಕಾಶವನ್ನು ಹೇಗೆ ವಿಸ್ತರಿಸಬಹುದೆಂಬುದನ್ನು ಪರಿಶೀಲಿಸೋಣ. ಅನಕ್ಷರಸ್ಥ ಮತ್ತು ಕುಶಲಕರ್ಮಿಗಳಲ್ಲದ ಜನರಿಗಾಗಿ ಉದ್ಯೋಗ ಭರವಸೆ ಯೋಜನೆಯೊಂದನ್ನು ರೂಪಿಸಲಿದ್ದೇವೆ.

೩೧. ಪುರಸಭೆಗಳ ಸಿಬ್ಬಂದಿ ವರ್ಗದವರ ವೇತನ ಮತ್ತು ಭತ್ಯೆಗಳ ಪರಿಷ್ಕರಣದಿಂದಾಗಿ ಪುರಸಭೆಗಳು ವಹಿಸಬೇಕಾಗಿ ಬಂದ ಹೆಚ್ಚಿನ ಹೊರೆಯನ್ನು ನೀಗಲು ಅವುಗಳಿಗೆ ಹೇಗೆ ಸಹಾಯ ಮಾಡಬೇಕೆಂಬುದನ್ನು ಸರ್ಕಾರ ಪರಿಶೀಲಿಸುತ್ತಿದೆ. ಈ ಹಿಂದೆ ಪುರಸಭೆಗಳು ತಮ್ಮ ಸಂಪನ್ಮೂಲಗಳನ್ನು ಅಷ್ಟೊಂದು ಅಗತ್ಯವಲ್ಲದ ಅಥವಾ ಕಡಿಮೆ ಆದ್ಯತೆಯ ಬಾಬುಗಳಿಗೆ ವೆಚ್ಚ ಮಾಡಿದ್ದವು. ಇದನ್ನು ಕಟ್ಟುನಿಟ್ಟಾಗಿ ತಡೆಗಟ್ಟಲೇಬೇಕು, ಪುರಸಭೆಗಳು ತಮ್ಮ ವೆಚ್ಚಗಳನ್ನು ಜಾಗರೂಕತೆಯಿಂದ ಯೋಜಿಸುವಂತೆ ಮತ್ತು ತಮ್ಮ ಪ್ರದೇಶದ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಹೆಚ್ಚು ಗಮನ ಕೊಡುವಂತೆ ಅವುಗಳಿಗೆ ಪ್ರೋತ್ಸಾಹ ನೀಡಲು ನಿರ್ದಿಷ್ಟ ಅಭಿವೃದ್ಧಿ ಯೋಜನೆಗಳಿಗಾಗಿಯೇ ಮೀಸಲಿಟ್ಟ "ಅಭಿವೃದ್ಧಿ ಅನುದಾನಗಳ" ವ್ಯವಸ್ಥೆಯೊಂದನ್ನು ರೂಪಿಸಲಾಗುತ್ತಿದೆ. ಈ ವಿಶೇಷ ಅನುದಾನಗಳು, ಪ್ರಮುಖ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಸಂಬಂಧಿಸಿರುವುದಲ್ಲದೆ, ಈ ವ್ಯವಸ್ಥೆಯ ಮೇರೆಗೆ ಪುರಸಭೆಗಳ ತೆರಿಗೆ ಬಾಕಿ ಪರಿಸ್ಥಿತಿಗಳನ್ನು ಮತ್ತು ಪುರಸಭೆಗಳು ತೆರಿಗೆ ವಿಧಿಸಿ ವಸೂಲು ಮಾಡುವಲ್ಲಿ ವಹಿಸಿದ ಆಸಕ್ತಿಯನ್ನು ಗಮನಕ್ಕೆ ತೆಗೆದುಕೊಳ್ಳಲಾಗುವುದು. ಕೇವಲ "ಅಡ್‌ಹಾಕ್" ಸಹಾಯಕ್ಕೆ ಬದಲಾಗಿ ಏರ್ಪಡಿಸಿದ ಈ ವ್ಯವಸ್ಥೆಯನ್ನು ಸದನವು ಅನುಮೋದಿಸುತ್ತದೆಂದು ಭಾವಿಸುತ್ತೇನೆ. ಈ ಯೋಜನೆಗಾಗಿ ಬಜೆಟಿನಲ್ಲಿ ೨ ಕೋಟಿ ರೂಪಾಯಿಗಳ ಹೆಚ್ಚಿನ ಏರ್ಪಾಡು ಮಾಡಲಾಗಿದೆ.

೩೨. ಈಗಾಗಲೇ ಹೇಳಿರುವಂತೆ, ಬರುವ ವರ್ಷದ ಯೋಜನೆಯಲ್ಲಿ ವಿವಿಧ ಜಲ-ವಿದ್ಯುತ್ ಯೋಜನೆಗಳ ಕಾರ್ಯ ಸಾಮರ್ಥ್ಯದ ಮಿತಿಯವರೆಗೆ ವಿದ್ಯುತ್ ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ಹಣ ಒದಗಿಸಲು ಸರ್ವ ಪ್ರಯತ್ನ ಮಾಡಲಾಗುವುದು. ಇದಲ್ಲದೆ, ರಾಯಚೂರಿನ ಬಳಿ ಥರ್ಮಲ್ ಪ್ಲಾಂಟ್ ಒಂದನು ಸ್ಥಾಪಿಸಲೂ ಉದ್ದೇಶಿಸಲಾಗಿದೆ. ಜಲ-ವಿದ್ಯುತ್ ವ್ಯವಸ್ಥೆಯನ್ನು ಸಂಪೂರ್ಣವಾಗಿ ಅವಲಂಬಿಸಿದ ಪರಿಣಾಮವಾಗಿ ನಾವು ಪದೇ ಪದೇ ಬಹಳ ತೊಂದರೆಗೀಡಾಗಿದ್ದೇವೆ. ಥರ್ಮಲ್ ಮತ್ತು ಜಲ-ವಿದ್ಯುತ್ ಉತ್ಪಾದನೆಯ ಜಂಟಿ ಯೋಜನೆಯು, ವಿದ್ಯುಚ್ಛಕ್ತಿ ಉತ್ಪಾದನಾ ವ್ಯವಸ್ಥೆಯನ್ನು ಬಲಗೊಳಿಸಿ, ಅದನ್ನು ಸ್ಥಿರಗೊಳಿಸುವುದಲ್ಲದೆ, ಬಳಕೆದಾರರನ್ನು ವಿಶೇಷವಾಗಿ ಔದ್ಯಮಿಕ ಬಳಕೆದಾರರನ್ನು, ಸರಬರಾಜಿನ ಏರಿಳಿತದ ತೊಂದರೆಯಿಂದ ರಕ್ಷಿಸುತ್ತದೆ.

೩೩. ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯು ವಿವಿಧ ವರ್ಗಗಳ ಬಳಕೆದಾರರಿಗೆ ವಿಧಿಸಬಹುದಾದ ಶುಲ್ಕ ದರಗಳನ್ನು ಕೆಲವು ವರ್ಷಗಳ ಹಿಂದೆಯೇ ನಿಗದಿಪಡಿಸಿತ್ತು. ನಿರ್ವಹಣಾ ವೆಚ್ಚಗಳು ಏರುತ್ತಿರುವುದರಿಂದ ಶುಲ್ಕದರಗಳನ್ನು ಹೆಚ್ಚಿಸುವುದು ಅವಶ್ಯವಾಗಿದೆ. ಆದ್ದರಿಂದ ೧೯೭೮ರ ಏಪ್ರಿಲ್ ೧ ರಿಂದ ಶುಲ್ಕದರಗಳನ್ನು ಪರಿಷ್ಕರಿಸಲು ನಿರ್ಧರಿಸಲಾಗಿದೆ. ಯಥಾ ಕ್ರಮದಲ್ಲಿ ಪ್ರತಿ ಯೂನಿಟ್ಟಿನ ಒಟ್ಟು ಸರಾಸರಿ ದರವು ೧೪ ಪೈಸೆಯಿಂದ ೧೭ ಪೈಸೆಗೆ ಏರುವ ಸಮಗ್ರ ಪರಿಣಾಮವುಳ್ಳ ಒಂದು ಪರಿಷ್ಕೃತ ಶುಲ್ಕದರ ವ್ಯವಸ್ಥೆಯನ್ನು ಕುರಿತು ನಾವು ಯೋಚಿಸುತ್ತಿದ್ದೆವು. ಆದರೆ, ಬಳಕೆಯಾದ ವಿದ್ಯುಚ್ಛಕ್ತಿ ಮತ್ತು ಟ್ರಾನ್ಸ್‌ಮಿಷನ್ ನಷ್ಟಗಳೂ ಸೇರಿದಂತೆ ಉತ್ಪಾದನೆಯಾದ ಒಟ್ಟು ವಿದ್ಯುಚ್ಛಕ್ತಿಯ ಮೇಲೆ ಕೇಂದ್ರ ಸರ್ಕಾರವು ಇತ್ತೀಚೆಗೆ ಪ್ರತಿ ಯೂನಿಟ್ಟಿಗೆ ೨ ಪೈಸೆಯಂತೆ ಶುಲ್ಕ ವಿಧಿಸಿರುವುದರಿಂದ ಒಟ್ಟು ಪರಿಷ್ಕೃತ ದರವನ್ನು ಪ್ರತಿ ಯೂನಿಟ್ಟಿಗೆ ೧೯.೫೦ ಪೈಸೆಯಂತೆ ನಿಗದಿಪಡಿಸುವುದು ಅನಿವಾರ್ಯವಾಯಿತು. ಹೀಗಾಗಿ ಬಳಕೆದಾರರ ಮೇಲೆ ಯೂನಿಟ್ಟಿಗೆ ೨.೫೦ ಪೈಸೆ ಹೆಚ್ಚಿನ ಹೊರೆ ಬಿದ್ದಂತಾಗಿದೆ.

ಇದೂ ಸಾಮಾನ್ಯ ಸರಾಸರಿಯಲ್ಲಿನ ಹೆಚ್ಚಳವಾದರೆ, ವಿವಿಧ ವರ್ಗಗಳ ಬಳಕೆದಾರರಿಗೆ ವಾಸ್ತವ ಹೆಚ್ಚಳ ಬೇರೆ ಬೇರೆಯಾಗಿರುತ್ತದೆ. ವಾಸ್ತವಿಕವಾಗಿ, ಕೃಷಿಯ ಬಗ್ಗೆ ನಮಗಿರುವ ಕಳಕಳಿಯಿಂದ, ಕೃಷಿ ಉದ್ದೇಶಗಳಿಗಾಗಿ ಬಳಸುವ ವಿದ್ಯುತ್ತಿನ ಮೇಲೆ ವಿಧಿಸಲಾಗುತ್ತಿರುವ ದರವನ್ನು ಈಗಿರುವಂತೆಯೇ ಉಳಿಸಿಕೊಂಡಿದ್ದೇವೆ. ಇದಲ್ಲದೆ ನಮಗೆ ತಿಂಗಳಿಗೆ ಸುಮಾರು ೨೦ ಲಕ್ಷ ರೂಪಾಯಿಗಳಷ್ಟು ಹುಟ್ಟುವಳಿ ನಷ್ಟವುಂಟಾಗಬಹುದಾದರೂ ೧೯೭೮ರ ಜನವರಿ ೧ ರಿಂದ, ಹೈಟೆನ್ಷನ್ ಬಳಕೆದಾರರಲ್ಲದ ಇತರ ಬಳಕೆದಾರರಿಗೆ ವಿಧಿಸಿದ್ದ ತಗಾದೆ ಚಾರ್ಜುಗಳನ್ನು ತೆಗೆದುಹಾಕಲಾಗಿದೆ. ಸಣ್ಣ ಕೈಗಾರಿಕೆಗಳಿಗೆ ಮತ್ತು ಕೃಷಿಕರಿಗೆ ಇದರಿಂದ ಅನುಕೂಲವಾಗುತ್ತದೆ. ೧೯೭೮ ಜನವರಿ ೧ ರಿಂದ ಮಾರ್ಚ್ ೩೧ರ ವರೆಗೆ ಡಿಮ್ಯಾಂಡ್ ಚಾರ್ಜ್‌ಗಳನ್ನು ವಸೂಲಿ ಮಾಡಿರುವಲ್ಲೆಲ್ಲಾ ಮುಂದಿನ ಬಿಲ್ಲುಗಳಲ್ಲಿ ವಜಾ ಮಾಡುವ ಮೂಲಕ ಅವುಗಳನ್ನು ಮರುಪಾವತಿ ಮಾಡಲಾಗುವುದು.

೩೪. ಭಾರತ ಸರ್ಕಾರವು ಪಾನ ನಿರೋಧವನ್ನು ಹಂತ ಹಂತವಾಗಿ ಜಾರಿಗೆ ತರುವುದನ್ನು ಅಪೇಕ್ಷಿಸುತ್ತದೆ ಎಂಬುದನ್ನು ಮಾನ್ಯ ಸದಸ್ಯರಿಗೆ ತಿಳಿದೆ ಇದೆ. ಮಿತ ಪಾನ ಶಿಕ್ಷಣದ ಮೂಲಕ ಜನರ ಮನವೊಲಿಸುವುದರ ಮೇಲೆಯೇ ಪಾನ ನಿರೋಧ ನೀತಿಯ ಯಶಸ್ಸು ಅವಲಂಬಿಸಿದೆ. ಈ ದಿಸೆಯಲ್ಲಿ, ಪಾನ ನಿರೋಧವನ್ನು ಹಂತ ಹಂತದಲ್ಲಿ ಜಾರಿಗೆ ತರುವ ಪ್ರಥಮ ಹೆಜ್ಜೆಯಾಗಿ, ವಾರದ ಕೆಲವೊಂದು ದಿನಗಳನ್ನು ಪಾನ ನಿಷಿದ್ಧ ದಿನಗಳೆಂದು ಆಚರಿಸುವ ಮೂಲಕ, ಹಾಗೂ ಮದ್ಯಪಾನವು ದುಬಾರಿಯಾಗುವಂತೆ ಮಾಡುವ ಮೂಲಕ, ಮಾದಕ ಪಾನೀಯಗಳ ಸೇವನೆಯನ್ನು ಜನರು ಬಿಟ್ಟುಬಿಡಲು ಅನುಕೂಲವಾಗುವಂತೆ ಕೆಲವೊಂದು ಕ್ರಮಗಳನ್ನು ಕೈಕೊಳ್ಳುವ ಆಲೋಚನೆ ಸರ್ಕಾರದ ಮುಂದಿದೆ.

೩೫. ರಾಜ್ಯದ ಆರನೇ ಪಂಚವಾರ್ಷಿಕ ಯೋಜನೆಗೆ ಸಂಬಂಧಿಸಿದ ಅಂತಿಮ ನಿರ್ಧಾರವು, ಏಳನೇ ಆರ್ಥಿಕ ಆಯೋಗದ ತೀರ್ಪನ್ನು ಅವಲಂಬಿಸಿದೆಯೆಂದು ನಾನು ಈಮೊದಲೇ ಹೇಳಿದ್ದೇನೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಆಯೋಗಕ್ಕೆ ಅಗತ್ಯವಾದ ವಾಸ್ತವ ಅಂಕಿ ಅಂಶಗಳನ್ನು ನಾವು ಈಗಾಗಲೇ ಒದಗಿಸಿದ್ದೇವೆ, ಹಿಂದಿನವರ್ಷಗಳಲ್ಲಿ, ಸಂಪನ್ಮೂಲ ಸಂಗ್ರಹಣ ಕಾರ್ಯದಲ್ಲಿ, ನಾವು ಸಾಧಿಸಿದ ಉತ್ತಮ ಪ್ರಗತಿ, ಸಮರ್ಪಕ ಹಣಕಾಸು ನಿರ್ವಹಣೆ ಮತ್ತು ಹಿಂದಿನ ವರ್ಷಗಳಲ್ಲಿ ದೊಡ್ಡ ಪ್ರಮಾಣದ ಅಭಿವೃದ್ಧಿ ಕಾರ್ಯಗಳ ನಿಮಿತ್ತ ರಾಜ್ಯ ಸರ್ಕಾರವು ವಹಿಸಬೇಕಾಗಿ ಬಂದ ಅನಿವಾರ್ಯ ವೆಚ್ಚ—ಇವೆಲ್ಲವುಗಳನ್ನು ಆಧರಿಸಿ ರಾಜ್ಯಕ್ಕೆ ಗಮನಾರ್ಹ ಪ್ರಮಾಣದಲ್ಲಿ ಆರ್ಥಿಕ ಸಹಾಯ ಒದಗಿಸುವಂತೆ ಒತ್ತಾಯಿಸುವ ಜ್ಞಾಪನ ಪತ್ರವನ್ನು ಅಂತಿಮಗೊಳಿಸಿ ಇಷ್ಟರಲ್ಲೇ ಆರ್ಥಿಕ ಆಯೋಗಕ್ಕೆ ಸಲ್ಲಿಸಿದ್ದೇವೆ. ಏಪ್ರಿಲ್ ತಿಂಗಳ ಕೊನೆಗೆ ಆಯೋಗವು ನಮ್ಮ ರಾಜ್ಯಕ್ಕೆ ಭೇಟಿ ನೀಡುವ ನಿರೀಕ್ಷೆಯಿದೆ. ನೇರ ಮತ್ತು ಸ್ಪಷ್ಟ ವಿಚಾರ ವಿನಿಯಮದ ದೃಷ್ಟಿಯಿಂದ ಈ ಭೇಟಿ ಸ್ವಾಗತಾರ್ಹ. ೧೯೭೮ರ ಅಕ್ಟೋಬರ್ ಕೊನೆಯ ವೇಳೆಗೆ ಆಯೋಗವು ತೀರ್ಪು ನೀಡಲಿದೆ.

೩೫(೧) ಸಂಕಷ್ಟ ಭತ್ಯದ ಬಗ್ಗೆ ಇಂಗ್ಲೀಷ್‌ನಲ್ಲಿ ಓದಿದ ಹೇಳಿಕೆಯನ್ನು ಭಾಷಣದ ಇಂಗ್ಲೀಷ್ ಪ್ರತಿಯಲ್ಲಿ ಕೊಡಲಾಗಿದೆ.

೩೬. ೧೯೭೭-೭೮ನೆಯ ಸಾಲಿನ ಪರಿಷ್ಕೃತ ಅಂದಾಜುಗಳು ಮತ್ತು ೧೯೭೮-೭೯ನೇ ಸಾಲಿನ ಬಜೆಟ್ ಅಂದಾಜುಗಳು ಕೆಳಕಂಡಂತಿವೆ:—

೧೯೭೭-೭೮ರ ಪರಿಷ್ಕೃತ ಅಂದಾಜುಗಳು ರೆವೆನ್ಯೂ ಲೆಕ್ಕದಲ್ಲಿ ಒಟ್ಟು ೫೯೭.೭೯ ಕೋಟಿ ರೂಪಾಯಿ ಜಮೆಯನ್ನು ಸೂಚಿಸುವುವು. ೨೮.೧೫ ಕೋಟಿ ರೂಪಾಯಿಯ ರೆವೆನ್ಯೂ ಹೆಚ್ಚುವರಿಯನ್ನು ಬಿಟ್ಟು ರೆವೆನ್ಯೂ ವೆಚ್ಚವು ೫೬೯.೬೪ ಕೋಟಿ ರೂಪಾಯಿ ಎಂದು ಅಂದಾಜು ಮಾಡಲಾಗಿದೆ. ರೆವೆನ್ಯೂ ಲೆಕ್ಕದಲ್ಲಿ ಹೆಚ್ಚುವರಿಯು ೧೯೭೭-೭೮ರ ಬಜೆಟಿಗಿಂತ ೩.೫೩ ಕೋಟಿ ರೂಪಾಯಿಯಷ್ಟು ಹೆಚ್ಚಿದೆ. ಭಾರತ ಸರ್ಕಾರದಿಂದ ಯೋಜನಾ ಸಹಾಯ ರೂಪದಲ್ಲಿ ಹೆಚ್ಚು ಅನುದಾನಗಳು ದೊರೆತುದು ಮತ್ತು ಅನಗತ್ಯವಾದ ವೆಚ್ಚದಲ್ಲಿ ಕೆಲವೊಂದು ಮಿತವ್ಯಯ ಕ್ರಮಗಳನ್ನು ಕೈಕೊಂಡುದೇ ಇದಕ್ಕೆ ಮುಖ್ಯ ಕಾರಣ. ಬಜೆಟಿನಲ್ಲಿ ೧೦೭.೬೨ ಕೋಟಿ ರೂಪಾಯಿ ಬಂಡವಾಳ ವೆಚ್ಚವೆಂದು ಪರಿಗಣಿಸಿದ್ದರೂ ಇದು ೧೧೭.೬೦ ಕೋಟಿ ರೂಪಾಯಿಯಷ್ಟಾಗುವುದು. ೧೦ ಕೋಟಿ

ರೂಪಾಯಿಯ ಈ ಹೆಚ್ಚಳವು ಪ್ರಧಾನವಾಗಿ ಭಾರೀ ಮತ್ತು ಮಧ್ಯಮ ನೀರಾವರಿ ಮತ್ತು ರಸ್ತೆಗಳ ನಿರ್ಮಾಣ ಕಾಮಗಾರಿಗಳ ಸಂಬಂಧದಲ್ಲಿ ನಮ್ಮ ಅಭಿವೃದ್ಧಿ ಚಟುವಟಿಕೆಗಳ ಪರಿಣಾಮವೆಂದೇ ಹೇಳಬೇಕು. ೨೧೩.೮೨ ಕೋಟಿ ರೂಪಾಯಿ ಬಂಡವಾಳ ಜಮೆಗಳನ್ನು ಮತ್ತು ಬಂಡವಾಳ ಲೆಕ್ಕದಲ್ಲಿಯ ಇತರ ಬಟವಾಡೆಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಬಂಡವಾಳ ಲೆಕ್ಕದಲ್ಲಿಯ ನಿವ್ವಳ ಕೊರತೆಯು ಸುಮಾರು ೭೫ ಕೋಟಿ ರೂಪಾಯಿ ಆಗುವುದು. ಹೀಗಾಗಿ ನಮಗೆ ಕೊನೆಯಲ್ಲಿ ೫೬.೦೨ ಕೋಟಿ ರೂಪಾಯಿಯ ಅಂತರ ಉಂಟಾಗುವುದು. ೯.೫೧ ಕೋಟಿ ರೂಪಾಯಿ ವಜಾ ಲೆಕ್ಕದಿಂದ ಸೂಚಿತವಾದಂತೆ ಪ್ರಾರಂಭದ ಶಿಲ್ಕಿನಲ್ಲಿ ೨೦,೩೫ ಕೋಟಿ ರೂಪಾಯಿಯ ಖಜಾನೆ ಬಿಲ್ಲುಗಳನ್ನು ಮತ್ತು ೨.೭೧ ಕೋಟಿ ರೂಪಾಯಿಯ ಚಲ ಋಣವನ್ನು ಗಣನೆಗೆ ತೆಗೆದುಕೊಂಡಿಲ್ಲ. ಇದರಿಂದ ೧೯೭೭-೭೮ನೆಯ ಸಾಲಿನ ಪ್ರಾರಂಭದ ಶಿಲ್ಕು ೮.೧೪ ಕೋಟಿ ರೂಪಾಯಿಯಷ್ಟಾಗುವುದು. ೧೯೭೮-೭೯ನೆಯ ಸಾಲಿನ ಬಜೆಟಿನಲ್ಲಿ ೬೭೫ ೫೩ ಕೋಟಿ ರೂಪಾಯಿ ರೆವೆನ್ಯೂ ಲೆಕ್ಕದ ಜಮೆ ಎಂದೂ ೬೫೬.೩೧ ಕೋಟಿ ರೂಪಾಯಿ ವೆಚ್ಚವೆಂದೂ ತೋರಿಸಲಾಗಿದೆ. ಇದರಿಂದ ೧೯,೨೨ ಕೋಟಿ ರೂಪಾಯಿ ಹೆಚ್ಚುವರಿಯನ್ನು ಸೂಚಿಸಿದಂತಾಯಿತು. ಒಟ್ಟಿನಲ್ಲಿ ಬಂಡವಾಳ ಲೆಕ್ಕದಲ್ಲಿಯ ವೆಚ್ಚವು ೩೨೭.೪೪ ಕೋಟಿ ರೂಪಾಯಿಯಷ್ಟಾಗಿದ್ದರೆ, ಜಮೆ ಲೆಕ್ಕವು ೨೪೩.೩೦ ಕೋಟಿ ರೂಪಾಯಿಯಷ್ಟಾಗಿದೆ ; ಹೀಗಾಗಿ ಬಂಡವಾಳ ಲೆಕ್ಕದಲ್ಲಿ ೮೪.೧೪ ಕೋಟಿ ರೂಪಾಯಿಯಷ್ಟು ಕೊರತೆಯು ಕಂಡುಬರುವುದು. ಪರಿಣಾಮವಾಗಿ ನಿವ್ವಳ ಕೊರತೆಯು ೬೪.೯೨ ಕೋಟಿ ರೂಪಾಯಿಯಷ್ಟಾಗಿದೆ. ಪ್ರಸಕ್ತ ವರ್ಷದ ಮುಕ್ತಾಯ ಸಿಲ್ಕು (—) ೫೬.೦೨ ಕೋಟಿ ರೂಪಾಯಿ ಎಂದು ತೆಗೆದುಕೊಂಡರೆ ೧೯೭೮-೭೯ರ ಒಟ್ಟು ಮುಕ್ತಾಯ ಶಿಲ್ಕು (—) ೧೨೦.೯೪ ಕೋಟಿ ರೂಪಾಯಿಯಷ್ಟಾಗುವುದು. ಆದರೆ, ಪ್ರಸಕ್ತ ವರ್ಷದ ಪ್ರಾರಂಭದಲ್ಲಿ ಬಾಕಿಯಿರುವ ಖಜಾನೆ ಬಿಲ್ಲುಗಳನ್ನು ಲಕ್ಷ್ಯದಲ್ಲಿಟ್ಟರೆ, ನಾನು ಈ ಮೊದಲೇ ಹೇಳಿದಂತೆ, ವಾಸ್ತವಿಕ ಮುಕ್ತಾಯ ಶಿಲ್ಕು (—) ೧೦೩.೩೦ ಕೋಟಿ ರೂಪಾಯಿಯಷ್ಟಾಗುವುದು.

೩೭. ೧೯೭೮-೭೯ರ ಬಜೆಟ್ ಅಂದಾಜಿನಲ್ಲಿ ೧೨೦.೯೪ ಕೋಟಿ ರೂಪಾಯಿ ಕೊರತೆ ತೋರಿಸಿರುವುದನ್ನು ಮಾನ್ಯ ಸದಸ್ಯರು ಗಮನಿಸಿರಬಹುದು. ಈ ಕೊರತೆಯನ್ನು ತುಂಬಲು ಯಾವುದೇ ನಿರ್ದಿಷ್ಟ ಕ್ರಮಗಳನ್ನು ನಾನು ಈ ಹಂತದಲ್ಲಿ ಸೂಚಿಸುತ್ತಿಲ್ಲ. ಜಮೆಗಳಲ್ಲಿ ವಾಡಿಕೆಯ ಹೆಚ್ಚಳ ಮತ್ತು ಬಾಕಿ ವಸೂಲಿಯೂ ಸೇರಿ, ವಸೂಲಿ ಕಾರ್ಯದಲ್ಲಿ ಸುಧಾರಣೆ—ಇವುಗಳಿಂದ ಕೊರತೆಯ ಬಹು ಭಾಗವನ್ನು ತುಂಬಿಕೊಳ್ಳಬಹುದೆಂದು ನಾವು ಆಶಿಸುತ್ತೇವೆ. ಈ ಅಂತರವನ್ನು ಕಡಿಮೆ ಮಾಡಲು ಯೋಜನೇತರ ಬಾಬುಗಳ ವೆಚ್ಚದಲ್ಲಿ ಪರಮಾವಧಿ ಮಿತವ್ಯಯ ಕ್ರಮಗಳನ್ನು ಕೈಕೊಳ್ಳಲಾಗುವುದು. ಈ ಬಜೆಟ್‌ನಲ್ಲಿ ಯಾವುವೇ ಹೊಸ ತೆರಿಗೆಗಳನ್ನು ಸೂಚಿಸಿಲ್ಲ, ಅವಶ್ಯವಿರುವ ಮಟ್ಟಿಗೆ ಹೊಸ ತೆರಿಗೆ ವಿಧಿಸುವುದಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟ ಪ್ರಸ್ತಾಪಗಳನ್ನು ಸ್ವಲ್ಪ ಸಮಯದ ತರುವಾಯ ನಾನು ಸದನದ ಮುಂದೆ ಮಂಡಿಸಲಿದ್ದೇನೆ,

೩೮. ಇಡೀ ವರ್ಷದ ಬಜೆಟ್ ಅಂದಾಜನ್ನು ಸದನದ ಮುಂದಿಡಲಾಗಿದೆ, ಆದರೆ, ಇಡೀ ವರ್ಷದ ವೆಚ್ಚಗಳಿಗೆ ಅನುಮೋದನೆ ನೀಡುವ ಮುನ್ನ, ಬೇಡಿಕೆಗಳನ್ನು ಕುರಿತು ವಿವರವಾದ ಚರ್ಚೆ ನಡೆಸಲು ಸಾಕಷ್ಟು ಕಾಲಾವಕಾಶ ಅಗತ್ಯವಿದೆ. ಆದ್ದರಿಂದ, ಈ ವರ್ಷದ ಮೊದಲ ನಾಲ್ಕು ತಿಂಗಳ ವೆಚ್ಚಕ್ಕೆ ಅಗತ್ಯವಾದ 'ಲೇಖಾನುದಾನ'ವನ್ನು ನಾನು ಕೋರುತ್ತೇನೆ. ನಾನು ಈಗ ೧೯೭೮-೭೯ನೇ ಸಾಲಿನ ಬಜೆಟ್ ಅಂದಾಜನ್ನು ತಮ್ಮ ಪರಿಶೀಲನೆಗಾಗಿ ಹಾಗೂ ಅನುಮೋದನೆಗಾಗಿ ಮಂಡಿಸುತ್ತಿದ್ದೇನೆ.

ಬಜೆಟ್‌ನ ವಿಹಂಗಮ ನೋಟ

ಕೋಟಿ ರೂಪಾಯಿ

	ಬಜೆಟ್ ಅಂದಾಜುಗಳು 1977–78	ಪರಿಷ್ಕೃತ ಅಂದಾಜುಗಳು 1977–78	ಬಜೆಟ್ ಅಂದಾಜುಗಳು 1978–79
ಪ್ರಾರಂಭದ ಶಿಲ್ಕು	+ (—) 12.14	(—) 9.51	—56.02
ಎ. ರಾಜಸ್ವ ಲೆಕ್ಕ			
I ಜಮೆ :			
ರಾಜ್ಯ ತೆರಿಗೆ ...	293.52	292.38	312.15
ಕೇಂದ್ರ ತೆರಿಗೆಯ ಪಾಲು ...	97.11	97.73	107.26
ಕೇಂದ್ರ ಸರ್ಕಾರದಿಂದ ಪಡೆದ ಅನುದಾನ ...	50.09	60.34	78.91
ತೆರಿಗೆಯೇತರ ರಾಜಸ್ವ ...	154.75	147.34	177.21
ಒಟ್ಟು—ಎ I	595.47	597.79	675.53
II ವೆಚ್ಚ :			
ಸಾಮಾಜಿಕ ಹಾಗೂ ಸಾಮುದಾಯಿಕ ಸೇವೆಗಳು ...	224.93	226.66	249.43
ಆರ್ಥಿಕ ಸೇವೆಗಳು ...	178.32	181.52	217.17
ಸಾಮಾನ್ಯ ಸೇವೆಗಳು ...	158.84	152.39	180.23
ಸಹಾಯಾನುದಾನ ಮತ್ತು ಅಂಶದಾನ ...	8.75	9.07	9.48
ಒಟ್ಟು ಎ II	570.84	569.64	656.31
ಎ. ರಾಜಸ್ವ ಲೆಕ್ಕ ಹೆಚ್ಚಳ (+)	+24.63	+28.15	+19.22

ಕೋಟಿ ರೂಪಾಯಿ

	ಬಜೆಟ್ ಅಂದಾಜುಗಳು 1977–78	ಪರಿಷ್ಕೃತ ಅಂದಾಜುಗಳು 1977–78	ಬಜೆಟ್ ಅಂದಾಜುಗಳು 1978–79
ಬಿ. ಬಂಡವಾಳ ಲೆಕ್ಕ			
I ಜಮೆ :			
ಭಾರತ ಸರ್ಕಾರದಿಂದ ಪಡೆದ ಸಾಲ	74.06	121.18	130.41
ಬಹಿರಂಗ ಮಾರುಕಟ್ಟೆ, ಸಾಲ, ಇತ್ಯಾದಿ	24.07	17.06	27.21
ಎಲ್‌ಎಸ್ ಆರ್‌ಬಿಐ, ಎಸ್‌ಎಐಎಲ್ ಮತ್ತು ಎನ್‌ಸಿಡಿಸಿಗಳಿಂದ ಪಡೆದ ಸಾಲ	19.25	22.00	7.53
ಸಾಲ ಮತ್ತು ಮುಂಗಡಗಳ ವಸೂಲಿ	26.25	22.73	30.60
ಸಾರ್ವಜನಿಕ ಲೆಕ್ಕ (ನಿವ್ವಳ) ಮುಂತಾದವು	35,50	30.85	47.55
ಒಟ್ಟು ಬಿ I :	179.13	213.82	243.30
II ವಿತರಣೆಗಳು :			
ಬಂಡವಾಳ ವೆಚ್ಚ	107.62	117.60	155.88
ಕೇಂದ್ರ ಸಾಲಗಳ ಮರುಪಾವತಿ	36.62	38.02	44.37
ಬಹಿರಂಗ ಮಾರುಕಟ್ಟೆ, ಸಾಲ ಮುಂತಾದವುಗಳ ಮರುಪಾವತಿ	5.32	5.34	4.17
ಎಲ್‌ಐಸಿ, ಆರ್‌ಬಿಐ, ಎಸ್‌ಎಐಎಲ ಮತ್ತು ಎನ್‌ಸಿಡಿಸಿಗೆ ಸಾಲಗಳ ಮರುಪಾವತಿ	2.95	26.94	3.23
ಸಾಲ ಮತ್ತು ಮುಂಗಡಗಳ ವಿತರಣೆ	77.31	100.58	119.79
ಒಟ್ಟು ಬಿ II :	229.82	288.48	327.44
ಬಿ. ಬಂಡವಾಳ ಕೊರತೆ (—)	—50.69	—74.66	—84.14
ಸಿ. ಒಟ್ಟಿನ ಮೇಲೆ ಕೊರತೆ	—26.06	—46.51	—64.92
ಡಿ. ಮುಕ್ತಾಯದ ಶಿಲ್ಕು	—38.20	—56.02	—120.94
ಇ. ವಜಾ : ಹೆಚ್ಚಿನ ತೆರಿಗೆ	6.05*	...	...
ಎಫ್. ಒಟ್ಟಿನ ಮೇಲೆ ಕೊರತೆ	—32.15	—56.02	120.94@

* ಕೇಂದ್ರ ತೆರಿಗೆಯಿಂದ ಹೆಚ್ಚಿಗೆ ಬರುವ 5 ಕೋಟಿ ರೂಪಾಯಿ ಇದರಲ್ಲಿ ಸೇರಿರುತ್ತದೆ,

@ 31–3–1977ರಲ್ಲಿ ಇದ್ದಂತ 20.35 ಕೋಟಿ ರೂಪಾಯಿ ಮೊತ್ತದ ಖಜಾನೆ ಬಿಲ್ಲುಗಳನ್ನು ಮತ್ತು 2.71 ಕೋಟಿ ರೂಪಾಯಿಗಳ ಚಲ ಋಣವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಒಟ್ಟಾರೆ ಅಂತರವು (—) 103.30 ಕೋಟಿ ರೂಪಾಯಿಯಾಗುವುದು.